ವಿಜಯಪುರ | ಸಂಪುಟ 02 | ಸಂಚಿಕೆ 100 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com    RNI NO: KARKAN/2023/86203    ಶನಿವಾರ, ಜೂನ್ 08, 2024

“ಬೆಂಗಳೂರು ಗ್ರಾಮಾಂತರದಲ್ಲಿ ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಎಲ್ಲ ಬಿಜೆಪಿ ಮತ್ತು ಜೆಡಿಎಸ್ ಮತಗಳು ಒಟ್ಟಿಗೆ ಬರುತ್ತವೆ ಎಂದು ನಮಗೆ ತಿಳಿದಿತ್ತು. ಆದರೆ, ಅದು ಈ ರೀತಿ ಆಗುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಇದು ನನ್ನ ವೈಯಕ್ತಿಕ ಸೋಲಾಗಿದೆ.”

– ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿಗಳು



ರಾಷ್ಟ್ರಪತಿ ಮುರ್ಮು ಭೇಟಿಯಾದ ಮೋದಿ । ಸರ್ಕಾರ ರಚನೆಗೆ ಹಕ್ಕು ಮಂಡನೆ । ರಾಷ್ಟ್ರಪತಿಗಳಿಂದ ಮೋದಿಗೆ ಸರ್ಕಾರ ರಚಿಸಲು ಆಹ್ವಾನ

# ನಾಳೆ 3ನೇ ಬಾರಿ ಪ್ರಧಾನಿಯಾಗಿ ಮೋದಿ ಪ್ರಮಾಣ ವಚನ ಸ್ವೀಕಾರ

ನವದೆಹಲಿ: ಎನ್‌ಡಿಎ ನಾಯಕ ನರೇಂದ್ರ ಮೋದಿ ಅವರು ಶುಕ್ರವಾರ ರಾಷ್ಟ್ರಪತಿ ಭವನದಲ್ಲಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ಕೇಂದ್ರದಲ್ಲಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಇದರ ಬೆನ್ನಲ್ಲೇ ರಾಷ್ಟ್ರಪತಿಗಳು ಎನ್‌ಡಿಎ ನಾಯಕ ಪ್ರಧಾನಿ ಮೋದಿಯವರನ್ನು ಸರ್ಕಾರ ರಚಿಸಲು ಆಹ್ವಾನಿಸಿದರು.

ನರೇಂದ್ರ ಮೋದಿ ಅವರು ಭಾನುವಾರ (ಜೂನ್ 9) ಸಂಜೆ 7 ಗಂಟೆಗೆ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ರಾಷ್ಟ್ರಪತಿಯವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಪ್ರಧಾನಿ ಮೋದಿ, “ದೇಶಕ್ಕೆ ಸೇವೆ ಸಲ್ಲಿಸಲು ಜನರು ಮೂರನೇ ಬಾರಿಗೆ ಎನ್‌ಡಿಎ ಸರ್ಕಾರಕ್ಕೆ ಅವಕಾಶ ನೀಡಿದ್ದಾರೆ. ಕಳೆದ ಎರಡು ಅವಧಿಗಳಲ್ಲಿ, ದೇಶವು ಮುನ್ನಡೆದ



ವೇಗದಲ್ಲಿ, ಪ್ರತಿಯೊಂದು ವಲಯದಲ್ಲಿ ಬದಲಾವಣೆಯು ಗೋಚರಿಸುತ್ತದೆ ಮತ್ತು 25 ಕೋಟಿ ಜನರು ಬಡತನದಿಂದ ಹೊರಬರುವುದು ಪ್ರತಿ ಭಾರತಕ್ಕೂ ಹೆಮ್ಮೆಯ ಕ್ಷಣವಾಗಿದೆ ಎಂದು ನಾನು ದೇಶದ ಜನರಿಗೆ ಭರವಸೆ ನೀಡುತ್ತೇನೆ” ಎಂದರು.

“ರಾಷ್ಟ್ರವು ಈ ಸ್ಥಾನಮಾನದಿಂದ ಗಮನಾರ್ಹ ಪ್ರಯೋಜನಗಳನ್ನು ಪಡೆದುಕೊಳ್ಳಲು ಸಜ್ಜಾಗಿದೆ” ಎಂದು ಅವರು ಒತ್ತಿಹೇಳಿದರು. ಮುಂದಿನ ಐದು ವರ್ಷಗಳು ಜಾಗತಿಕ ಭೂದೃಶ್ಯದೊಳಗೆ ಭಾರತಕ್ಕೆ ಅತ್ಯಂತ ಅನುಕೂಲಕರವಾಗಿರುತ್ತದೆ ಎಂದು ವಿಶ್ವಾಸದಿಂದ ಭವಿಷ್ಯ ನುಡಿದರು. ಅವರು ದೇಶದ ಬೆಳೆಯುತ್ತಿರುವ ಪ್ರಭಾವವನ್ನು ಒತ್ತಿಹೇಳಿದ ಅವರು, ಮುಂಬರುವ ವರ್ಷಗಳಲ್ಲಿ ಅದು ಅಂತರಾಷ್ಟ್ರೀಯ ವೇದಿಕೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದರು.

“ಪ್ರಪಂಚವು ಅನೇಕ ಬಿಕ್ಕಟ್ಟುಗಳು, ಅನೇಕ ಉದ್ವಿಗ್ನತೆಗಳು, ವಿಪತ್ತುಗಳ ಮೂಲಕ ಸಾಗುತ್ತಿದೆ ಭಾರತೀಯರು ನಾವು ಅದೃಷ್ಟವಂತರು, ಇಷ್ಟು ದೊಡ್ಡ ಬಿಕ್ಕಟ್ಟುಗಳ ಹೊರತಾಗಿಯೂ, ನಾವು ಇಂದು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂದು ಕರೆಯಲ್ಪಡುತ್ತೇವೆ. ನಾವು ಬೆಳವಣಿಗೆಗಾಗಿ ಪ್ರಪಂಚದಲ್ಲಿ ಪ್ರಶಂಸೆಗೆ ಒಳಗಾಗುತ್ತೇವೆ” ಎಂದು ಹೇಳಿದರು.

ನರೇಂದ್ರ ಮೋದಿ ಅವರನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಸಂಸದೀಯ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಯಿತು. ಆ ಮೂಲಕ ಅವರು ಮೂರನೇ ಬಾರಿಗೆ ಪ್ರಧಾನಿಯಾಗಲು ದಾರಿ ಮಾಡಿಕೊಟ್ಟರು. ಸಂಸತ್ತಿನಲ್ಲಿ ಹೊಸದಾಗಿ ಆಯ್ಕೆಯಾದ ಸಂಸದರ ಸಭೆಯೂ ನಡೆಯಿತು. ಸಂಸತ್ ಭವನದ ಸಂವಿದಾನ ಸದನದಲ್ಲಿ ನಡೆದ ಸಭೆಯಲ್ಲಿ ಪ್ರಧಾನಿ ಮೋದಿಯವರನ್ನು ಸ್ವಾಗತಿಸಲಾಯಿತು.

ಸಭೆಯಲ್ಲಿ ಸೇರಲು ಆಗಮಿಸಿದ ಪ್ರಧಾನಿಯವರು ಗೌರವಪೂರ್ವಕವಾಗಿ ತಮ್ಮ ಹಣೆಯಿಂದ ಭಾರತದ ಸಂವಿಧಾನವನ್ನು ಸ್ಪರ್ಶಿಸಿದರು.

## ರಾಜ ನುಡಿ

ರಾಮಾಯಣ, ಮಹಾಭಾರತಗಳು ಕಲಿಸುವ ಮಹತ್ವದ ವಿಚಾರವೆಂದರೆ, ನುಡಿಯುವ ಮೊದಲು ‘ಮಾತುಗಳು’ ಮನುಷ್ಯನ ವಶದಲ್ಲಿರುತ್ತವೆ. ನುಡಿದ ಮೇಲೆ ‘ಮನುಷ್ಯ’ ಮಾತುಗಳ ವಶದಲ್ಲಿರುತ್ತಾನೆ. ಮಾತನಾಡುವ ಮೊದಲು ಯೋಚಿಸಿ.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 394

***ಹಾವಿನ ಬಾಯ ಕಪ್ಪೆ ಹಸಿದು***
***ಹಾರುವ ನೊಣಕ್ಕೆ ಆಸೆಮಾಡುವಂತೆ,***
***ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು***
***ಮೇಲೇಸುಕಾಲ ಬದುಕುವನೊ***
***ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು, ಒಡಲ ಹೊರೆವರ***
***ಕೂಡಲಸಂಗಮದೇವಯ್ಯನೊಲ್ಲ, ಕಾಣಿರಣ್ಣಾ.***

ಈ ವಚನದಲ್ಲಿ ಬಸವಣ್ಣನವರು ಮಾನವ ಜನ್ಮ ಪಡೆದ ಪ್ರತಿಯೊಬ್ಬ ವ್ಯಕ್ತಿಯು ಸಂಸಾರಿಕ ಜೀವನವನ್ನೇ ಪ್ರಮುಖವೆಂದು ಭಾವಿಸಿ , ಪಾರಿಮಾರ್ಥಕದ ಚಿಂತನೆ ಇಲ್ಲದೆ. ಈ ಭೂಮಿಯ ಮೇಲಿನ ಕೋಟ್ಯಾಂತರ ಜೀವಿಗಳ ಜೀವನದಂತೆ ಹುಟ್ಟುವುದು ಸಂತಾನವನ್ನು ಹುಟ್ಟಿಸುವುದು ಕೊನೆಗೆ ಸಾಯುವುದು ತರವಲ್ಲ ಎಂದಿದ್ದಾರೆ. ಇದಕ್ಕಾಗಿ ಕಡುವಡಲನ್ನು ಮೆಚ್ಚಿ,ಒಡಲ ಹೊರೆಯು ವುದಕ್ಕಾಗಿ ಸುಳ್ಳನ್ನು ಹೇಳಿ ಒಡಲ ಸಂತೃಪ್ತಿಯೇ ಜೀವನದ ಪರಮ ಉದ್ದೇಶವೆಂದು ಭಾವಿಸಿದವರನ್ನು ಇಲ್ಲಿ ಬಸವಣ್ಣನವರು ಎಚ್ಚರಿಸಿದ್ದಾರೆ. ಇಲ್ಲಿನ ಎಲ್ಲ ಜೀವಿಗಳು ಮತ್ತೊಂದು ಜೀವಿಯ ಮೇಲೆ ಅವಲಂಬನೆಯಾಗಿದೆ ಇಲ್ಲಿ ಯಾವುದು ಶಾಶ್ವತವಲ್ಲ. ಕೀಟವನ್ನು ತಿಂದು ಕಪ್ಪೆ , ಕಪ್ಪೆಯನ್ನು ತಿಂದು ಹಾವು, ಹಾವನ್ನು ತಿಂದು ಗರುಡ, ಗರುಡವನ್ನು ತಿಂದು ಬದುಕುವ ಮತ್ತೊಂದು ಜೀವಿ, ಹೀಗೆ ಆಹಾರ ಸರಪಳಿ ಬೆಳೆಯುತ್ತಾ ಹೋಗುತ್ತದೆ. ಇಲ್ಲಿ ನಾವೂ ಚಿರಂಜೀವಿಗಳಲ್ಲ ಎಂಬುದು ಗೊತ್ತಿದ್ದರೂ ಸಹ, ಕೇವಲ ಒಡಲ ಹೊರೆಯುವುದಕ್ಕಾಗಿ ಇಡೀ ಜೀವನವನ್ನು ವ್ಯೆಯಿಸದಂತೆ ಎಚ್ಚರಿಸುತ್ತಾರೆ. ಅಲ್ಲಮಪ್ರಭುಗಳು ಹೇಳುವಂತೆ “ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ,ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ. ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ.” ಈ ಭೂಮಿ ಮೇಲೆ ಕೋಟ್ಯಾಂತರ ಜನರು ಹುಟ್ಟಿ ಸಾವಿನೊಂದಿಗೆ ಅಳಿದುಹೋಗಿದ್ದಾರೆ. ತಮ್ಮ ಹುಟ್ಟಿನ ಮೂಲವ ನ್ನು ಅರಿತವರು ಕೆಲವೇ ಜನರು ಎಂಬುದನ್ನು ಮನಗಂಡ 12ನೇ ಶತಮಾನದ ಬಸವಾದಿ ಶರಣರು ಈ ನಿಟ್ಟಿನಲ್ಲಿ ಚಿಂತನೆಗೈದು ಮಹಾಲಿಂಗ ಚೈತನ್ಯದ ಅಂಶವಾದ ಪ್ರತಿಯೊಬ್ಬ ಪ್ರಾಣಲಿಂಗಧಾ ರಿಗಳು ಹೇಗೆ ನದಿಯ ನೀರು ಸಾಗರವನ್ನು ಸೇರುತ್ತದೆ ಅದೇ ರೀತಿಯಾಗಿ ಮಹಾಲಿಂಗವನ್ನು ಅರಿತು ಬೆರೆಯುವುದೇ ಜೀವನದ ಮುಖ್ಯ ಉದ್ದೇಶ ಎಂಬುದನ್ನು ಸಾರಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಹೆಸ್ಕಾಂ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಪಟ್ಟಣದ ವಿದ್ಯುತ್ ವ್ಯವಸ್ಥೆಯಲ್ಲಿ ನಿರಂತರ ನಿಲುಗಡೆಯಾಗುತ್ತಿದ್ದು, ಸಾರ್ವಜನಿಕರು ಬೇಸತ್ತಿದ್ದು, ಕೂಡಲೇ ಸಮರ್ಪಕವಾಗಿ ವಿದ್ಯುತ್ ಪೂರೈಸುವಂತೆ ಆಗ್ರಹಿಸಿ ಪಟ್ಟಣ ಪಂಚಾಯಿತಿ ಸದಸ್ಯರ ನೇತೃತ್ವದಲ್ಲಿ ಸಾರ್ವಜನಿಕರು ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಗೂ ಬೀಗ ಹಾಕಿ ಪ್ರತಿಭಟಿಸಿದರು.

ಶುಕ್ರವಾರ ಹೆಸ್ಕಾಂ ಕಚೇರಿ ಆವರಣಕ್ಕೆ ಬಂದ ಪಟ್ಟಣಪಂಚಾಯಿತಿ ಸದಸ್ಯರು ಹಾಗೂ ಸಾರ್ವಜನಿಕರು ವಿದ್ಯುತ್ ಪೂರೈಕೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿ ಶಾಖಾಧಿಕಾರಿ ಯು.ಎಲ್.ಪಟ್ಟಣ, ಅವರ ಜೊತೆ ವಾಗ್ವಾದಕ್ಕಿಳಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯ ಬಶೀರ್‌ಅಹ್ಮದ್ ಬೇಪಾರಿ ಮಾತನಾಡಿ, ನಾವು ಕಳೆದ ಮೂರು ತಿಂಗಳಿಂದ ಸತತ ವಿದ್ಯುತ್ ನಿಲುಗಡೆ ಸಮಸ್ಯೆಯಿಂದ ಬಳಲುತ್ತಿದ್ದೇವೆ. ಮಾರ್ಚ ತಿಂಗಳಿಂದ ರಾತ್ರಿ ಆಗುವುದೇ ತಡ ಗಾಳಿ, ಮಳೆ ಇರದೇ ಇದ್ದರೂ ಕರೆಂಟ್ ತೆಗೆಯಲಾಗುತ್ತದೆ. ಹೆಸ್ಕಾಂ ಸಿಬ್ಬಂದಿಗೆ ಫೋನ್ ಮಾಡಿ ವಿಚಾರಿಸಿದರೆ ಮೇನ್ ಲೈನ್ ಹೋಗಿದೆ ಎಂಬ ಸಿದ್ಧ ಉತ್ತರ ಬರುತ್ತದೆ. ಈ ಮೊದಲು ಬರದ ಮೇನ್ ಲೈನ್ ಸಮಸ್ಯೆ



ಈಗ ಮಾತ್ರ ಯಾಕೆ ಬರುತ್ತಿದೆ? ಎಂದು ಪ್ರಶ್ನಿಸಿ ವಿದ್ಯುತ್ ಸರಿಯಾಗಿ ನೀಡದೇ ಇರುವುದರಿಂದ ಸಣ್ಣ ಕೈಗಾರಿಕೆಗಳು ಕಾರ್ಯ ನಿರ್ವಹಿಸದಂತಾಗಿದೆ. ಜೊತೆಗೆ ಸಾರ್ವಜನಿಕ ಜೀವನಕ್ಕೆ ಸಾಕಷ್ಟು ಕಿರಿಕಿರಿಯಾಗುತ್ತಿದೆ. ಕೂಡಲೇ ಅಗತ್ಯ ಕ್ರಮ ಕೈಗೊಂಡು ನಿರಂತರ ವಿದ್ಯುತ್ ಒದಗಿಸಲು ಆಗ್ರಹಿಸಿದರು.

ಶಾಖಾಧಿಕಾರಿ ಯು.ಎಲ್.ಪಟ್ಟಣ ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಸಿಬ್ಬಂದಿಯು ಕೆಲವು ತಾಂತ್ರಿಕ ಕಾರಣಗಳಿಂದಾಗಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಒಂದು ವಾರದಲ್ಲಿ ಯಥಾ ಪ್ರಕಾರ ವಿದ್ಯುತ್ ಪೂರೈಸಲಾಗುವುದು ಎಂದು ಸಮಜಾಯಿಷಿ ನೀಡಿದರೂ ಕೇಳದ ಸಾರ್ವನಿಕರು ಎಇಇ ಅವರು ಬಂದು ಉತ್ತರಿಸುವಂತೆ ಪಟ್ಟು ಹಿಡಿದರು.

ಕೊನೆಗೆ ಶಾಖಾಧಿಕಾರಿ ವಿದ್ಯುತ್ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದಾಗ, ಪ್ರತಿಭಟನಾಕಾರರು 20 ದಿನಗಳ ಒಳಗಾಗಿ ವಿದ್ಯುತ್ ಸಮರ್ಪಕವಾಗಿ ಪೂರೈಸಬೇಕು ಇಲ್ಲವಾದಲ್ಲಿ ಮತ್ತೇ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿ ಮನವಿ ಸಲ್ಲಿಸಿದರು ನಂತರ ಪ್ರತಿಭಟನೆ ಕೊನೆಗೊಳಿಸಿದರು.

ಪಟ್ಟಣ ಪಂಚಾಯಿತಿ ಸದಸ್ಯರಾದ ಕಾಸುಗೌಡ ಬಿರಾದಾರ(ಜಲಕತ್ತಿ), ಶಾಂತಯ್ಯ ಜಡಿಮಠ, ರಮೇಶ ಮಸಬಿನಾಳ, ಕಾಶೀನಾಥ ಬಜಂತ್ರಿ, ಸಿಂಧೂರ ಡಾಲೇರ, ಸೇರಿದಂತೆ ಸೋಮು ದೇವೂರ, ಮುದುಕಪ್ಪ ದಾನಗೊಂಡ, ಕಾಶೀನಾಥ ಕೋರಿ, ಸಂಗು ಯಂಭತ್ನಾಳ, ಗುರು ರೂಗಿ, ಸುರೇಶ ಕೊಣ್ಣೂರ, ಸಂಗಮೇಶ ನಂದ್ಯಾಳ, ಕಾಶೀನಾಥ ಕಡ್ಲೇವಾಡ, ಹುಸೇನ್ ಬಿಜಾಪೂರ, ಬಸವರಾಜ ಅತನೂರ, ಅಬ್ದುಲ್ ರಜಾಕ್ ಮಂಡೆ, ಎಮ್.ಎಮ್.ವಗ್ಗರ, ಇಮ್ತಿಯಾಜ್ ಮುಲ್ಲಾ, ಜೆ.ಆಯ್.ಮಿಂಚನಾಳ, ನಾಗರಾಜ್ ಜಮಾದಾರ, ರಾಜು ಮೆಟಗಾರ, ಬಸವರಾಜ ಕುರುಬತಹಳ್ಳಿ, ಕಾಶೀನಾಥ ಅಗಸರ ಇದ್ದರು.

# ಬಿತ್ತನೆ ಬೀಜ-ರಸಗೊಬ್ಬರ ಬೆಲೆ ಇಳಿಕೆಗೆ ಪ್ರಾಂತ ರೈತ ಸಂಘ ಆಗ್ರಹ

ಉದಯರಶ್ಮಿ ನ್ಯೂಸ್

ವಿಜಯಪುರ: ಬಿತ್ತನೆ ಬೀಜ-ರಸಗೊಬ್ಬರ ಬೆಲೆ ಇಳಿಸಲು ಒತ್ತಾಯಿಸಿ, ನಕಲಿ ಕಳಪೆ ಮಾರಾಟ ತಡೆಗಟ್ಟಲು ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟನೆಗೆ ಕರೆಯ ಮೇರೆಗೆ ಬಿತ್ತನೆ ಬೀಜ-ರಸಗೊಬ್ಬರ ಬೆಲೆಗಳನ್ನು ಇಳಿಸಲು ಆಗ್ರಹಿಸಿ, ಕಳಪೆ ಹಾಗೂ ನಕಲಿ ಬಿತ್ತನೆ ಬೀಜ -ರಸಗೊಬ್ಬರಗಳ ಮಾರಾಟವನ್ನು ತಡೆಗಟ್ಟಲು. ಕೃತಕ ಅಭಾವ ಸೃಷ್ಟಿಸಿ ಕಾಳಸಂತೆ ಮಾರಾಟದ ಮೇಲೆ ಕಠಿಣ ಕ್ರಮಕ್ಕೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ವಿಜಯಪುರ ಜಿಲ್ಲಾ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಟಿ. ಭೂಬಾಲನ್ ಅವರಿಗೆ ಮನವಿ ಸಲ್ಲಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮರಾಯ ಪೂಜಾರಿ ಮಾತನಾಡಿ, ಬಲವಂತದ ಸಾಲ ವಸೂಲಾತಿ ನಿಲ್ಲಬೇಕು. ಬರ ಪರಿಹಾರದ ಹಣವನ್ನು ಸಾಲಕ್ಕೆ ಕಟಾಯಿಸಿಕೊಳ್ಳಬಾರದು. ಸಾಲಕ್ಕೆ ಬರ ಪರಿಹಾರದ ಹಣ ಕಳೆದುಕೊಂಡಿರುವ ರೈತರ ಖಾತೆಗೆ ಹಣ ಮರಳಿಸಲು ಕ್ರಮ ಕೈಗೊಳ್ಳಬೇಕು ಹಾಗೂ ರೈತರ ಆತ್ಮಹತ್ಯೆ ತಡೆಗಟ್ಟಬೇಕು. ಕೃಷಿ ಚಟುವಟಿಕೆಗಳಿಗೆ ಅಗತ್ಯ ಬೆಂಬಲ ಒದಗಿಸಬೇಕು ಮತ್ತು ಬೆಳೆ ವಿಮೆ ಪರಿಹಾರ ಇತ್ಯರ್ಥಕ್ಕೆ ಕ್ರಮ ವಹಿಸಬೇಕು ಎಂದು ರಾಜ್ಯ, ಕೇಂದ್ರ ಸರ್ಕಾರಗಳನ್ನು ಆಗ್ರಹಿಸಿ ರಾಜ್ಯಾದ್ಯಂತ ಕರೆ ನೀಡಲಾಗಿದೆ. ಕಳೆದ ವರ್ಷ ಶತಮಾನದಲ್ಲೇ ಕಂಡರಿಯದ ಭೀಕರ ಬರಗಾಲವನ್ನು ರಾಜ್ಯ ಅನುಭವಿಸಿತ್ತು. ಯಾವುದೇ ಅರ್ಥ ಪೂರ್ಣ ಬರ ಪರಿಹಾರ ಕ್ರಮಗಳಿಲ್ಲದೇ ದೊಡ್ಡ ಪ್ರಮಾಣದ ಸಂಕಷ್ಟಕ್ಕೆ ಸಿಲುಕಿ ನರಳುತ್ತಿರುವ ರೈತಾಪಿ ಸಮುದಾಯವನ್ನು ಬಿತ್ತನೆ ಬೀಜ-ರಸಗೊಬ್ಬರ ಬೆಲೆಗಳ ಏರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ಕೂಡಲೇ ಬೆಲೆಗಳನ್ನು ಇಳಿಸಬೇಕು. ಉತ್ತಮ ಮಳೆಯ ನಿರೀಕ್ಷೆಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುವ ರೈತರನ್ನು ಬೀಜ ಗೊಬ್ಬರದ ವ್ಯಾಪಾರಿಗಳು ಶೋಷಣೆ ಮಾಡದಂತೆ ರಕ್ಷಣೆ ಒದಗಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಕರ್ನಾಟಕ ರಾಜ್ಯ ಸಮಿತಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘದ ಜಿಲ್ಲಾಧ್ಯಕ್ಷೆ ಭಾರತಿ ವಾಲಿ ಮಾತನಾಡಿ, ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆ ಮಾರಾಟವನ್ನು ತಡೆಗಟ್ಟಬೇಕು, ಬಲವಂತದ ಸಾಲವಸೂಲಾತಿ ವಿರುದ್ಧ ರೈತರಿಗೆ ರಕ್ಷಣೆ ಒದಗಿಸಬೇಕು. ರಾಜ್ಯಾದ್ಯಂತ ನಡೆಯುತ್ತಿರುವ ವ್ಯಾಪಕ ರೈತ ಆತ್ಮಹತ್ಯೆಗಳನ್ನು ತಡೆಗಟ್ಟಲು ಅಗತ್ಯ ಕ್ರಮ ವಹಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಭಿನೇಶ ಮಣೂರ, ಎ.ಆರ್.ಮುಂಜಣ್ಣಿ, ನಿತ್ಯಾನಂದ ಸಾಗರ, ಎಮ್.ಎ.ಜಮಾದಾರ, ಅನುಸೂಯಾ ಹಜೇರಿ, ಶಮಶಾದ ಬೇಗಂ, ಸಾಹೇಬಿ ಶೇಖ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಮಳೆಯ ಅವಾಂತರ: ಕಿತ್ತು ಹೋದ ಸೇತುವೆ, ನೀರಲ್ಲಿ ನಿಂತ ದ್ರಾಕ್ಷಿ ಪಡ

ಉದಯರಶ್ಮಿ ನ್ಯೂಸ್

ತಿಕೋಟಾ: ಗುರುವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಹಳ್ಳ ಕೊಳ್ಳ ಬಾಂದಾರಗಳು ತುಂಬಿ ಹರಿಯುತ್ತಿದ್ದು ತಾಲ್ಲೂಕಿನ ಲೋಹಗಾಂವ ಗ್ರಾಮದ ವಿಜಯಪುರ ರಸ್ತೆಯು ಹಳ್ಳದಿಂದ ಹರಿಯುವ ನೀರಿನ ರಭಸಕ್ಕೆ ಸೇತುವೆ ಕಿತ್ತು ಹೋಗಿದೆ. ಬೆಳ್ಳಂಬೆಳಗ್ಗೆ ವಾಹನ ಸವಾರರು ತೊಂದರೆ ಅನುಭವಿಸಿದ್ದು ರಸ್ತೆ ಬಂದ್ ಆಗಿ ಸಾಲುಗಟ್ಟಲೆ ವಾಹನಗಳು ರಸ್ತೆಯುದ್ದಕ್ಕೂ ನಿಂತಿದ್ದವು.



ರಸ್ತೆ ಬಂದ್ ಆಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ವಿಷಯ ತಿಳಿದ ಸಚಿವ ಎಂ.ಬಿ.ಪಾಟೀಲ್ ಅವರು ತಮ್ಮ ಆಪ್ತಸಹಾಯಕ ಸಂತೋಷ ಲೋಕುರೆ ಹಾಗೂ ಪಿಡಬ್ಲುಡಿ ಎಇಇ ರವಿ ಪವಾರ ಅವರನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವಂತೆ ತಿಳಿಸಿದ್ದಾರೆ.



ಸ್ಥಳಕ್ಕೆ ಭೇಟಿ ನೀಡಿದ ಎಇಇ ಹಾಳಾದ ಸೇತುವೆ ಹತ್ತಿರ ತಾತ್ಕಾಲಿಕವಾಗಿ ಗರಸು ಹಾಕಿ ಜೆಸಿಬಿ ಮೂಲಕ ಮುಳ್ಳುಕಂಟಿ ತೆಗೆಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ತಾತ್ಕಾಲಿಕ ಪೈಪ್ ಹಾಕಿ ಕಾಮಗಾರಿ ಮಾಡಲಾಗುವದು. ಸೇತುವೆ ಹಾನಿ ಕುರಿತು ಸರ್ಕಾರಕ್ಕೆ ವರದಿ ನೀಡುತ್ತೇವೆ. ಶಾಶ್ವತ ಸೇತುವೆ ಮಂಜೂರಿಗೆ ವರದಿ ನೀಡುತ್ತೇವೆ. ಅನುದಾನ ಮಂಜೂರಾದ ನಂತರ ಶಾಶ್ವತ ಸೇತುವೆ ನಿರ್ಮಿಸಲಾಗುವದು ಎಂದು ಎಇಇ ರವಿ ಪವಾರ ತಿಳಿಸಿದರು.

ಸೇತುವೆ ಹಳೆಯದಾಗಿದ್ದು ನೀರಿನ ರಭಸಕ್ಕೆ ಪೈಪ್ ಕಿತ್ತು ಹೋಗಿವೆ. ಮೇಲಗಡೆ ಡಾಂಬರ್ ಹಾಗೂ ಕಾಂಕ್ರೀಟ್ ಮಾತ್ರ ಉಳಿದುಕೊಂಡಿದ್ದು, ಮೇಲಗಡೆ ವಾಹನ ಸಂಚಾರ ಮಾಡಿದರೆ ಕುಸಿದು ಬೀಳುತ್ತದೆ. ಬೇಗನೆ ಶಾಶ್ವತ ಸೇತುವೆ ನಿರ್ಮಿಸಬೇಕು ಎಂದು ವಾಹನ ಸವಾರರು ತಮ್ಮ ಅಳಲನ್ನು ತೊಡಿಕೊಂಡರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಇದ್ದರು.

ನೀರಲ್ಲಿ ನಿಂತ ದ್ರಾಕ್ಷಿ ಪಡ: ರಾತ್ರಿಯಿಡಿ ಸುರಿದ ಮಳೆಗೆ ಜಮೀನಿನ ಬದುಗಳು ತುಂಬಿಕೊಂಡಿದ್ದು, ತಾಲ್ಲೂಕಿನ ಘೋಣಸಗಿ ಗ್ರಾಮದ ರೈತ ಮಹಾದೇವ ಶ್ಯಾಮಣ್ಣ ಪೂಜಾರಿ ಇವರ ದ್ರಾಕ್ಷಿ ಪಡದಲ್ಲಿ ಮೊನಕಾಲವರೆಗೆ ಮಳೆ ನೀರು ತುಂಬಿತ್ತು.



# ಜೂ. 10 ರಂದು ಅಪ್ರೆಂಟಿಶಿಪ್‌ಗಾಗಿ ಕ್ಯಾಂಪಸ್ ಸಂದರ್ಶನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಬಿ.ಎಲ್.ಡಿ.ಈ ವಿಜಯಪುರ ಇವರ ಸಹಯೋಗದೊಂದಿಗೆ ಜೂ.10 ರಂದು ಬೆಳಿಗ್ಗೆ 9 ಗಂಟೆಗೆ ಟಾಟಾ ಪಾವರ ಸೋಲಾರ ಲಿ, ಬೆಂಗಳೂರು ವತಿಯಿಂದ ಐ.ಟಿ ಐ. ಪಾಸಾದಂತಹ ಹಾಗೂ ಅಂತಿಮ ವರ್ಷದ ಪರೀಕ್ಷೆಗೆ ಹಾಜರಾಗುತ್ತಿರುವ, 23 ವರ್ಷದೊಳಗಿನ ಅಭ್ಯರ್ಥಿಗಳಿಗೆ ಅಪ್ರೆಂಟಿಶಿಪ್‌ಗಾಗಿ ಕ್ಯಾಂಪಸ್ ಸಂದರ್ಶನವನ್ನು ಬಿ.ಎಲ್.ಡಿ.ಈ ಐ.ಟಿ.ಐ/ಪಾಲಿಟೆಕ್ನಿಕ್ ಕಾಲೇಜು ಆವರಣ, ಆಶ್ರಮ ರಸ್ತೆ ವಿಜಯಪುರದಲ್ಲಿ ಆಯೋಜಿಸಲಾಗಿದೆ.

ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಎಲ್ಲಾ ಸೆಮಿಸ್ಟರಗಳ ಮೂಲಪ್ರತಿ ಹಾಗೂ ಜೆರಾಕ್ಸ ಪ್ರತಿಗಳು, ಎರಡು ಭಾವಚಿತ್ರ ಮತ್ತು ರೆಸ್ಯೂಮ್ ನೊಂದಿಗೆ ಭಾಗವಹಿಸಬೇಕು,

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9916853605-9945000793 ಗೆ ಸಂಪರ್ಕಿಸಲು ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನುಪಯುಕ್ತ ವಸ್ತುಗಳ ವಿಲೇವಾರಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದ ಡಾ.ಬಿ.ಆರ್. ಅಂಬೇಡ್ಕರ ಕ್ರೀಡಾಂಗಣ ಹತ್ತಿರವಿರುವ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಕಚೇರಿ ವಿಜಯಪುರ ಕಚೇರಿಯಲ್ಲಿರುವ ಹಳೆಯ ಅನುಪಯುಕ್ತ ವಸ್ತುಗಳನ್ನು ಬರುವ ಜುಲೈ 11ರ 2024ರಂದು ಬೆಳಿಗ್ಗೆ 11ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿಲೇವಾರಿ ಮಾಡಲಾಗುವುದು.

ಆಸಕ್ತ ಸಾರ್ವಜನಿಕರು ಹೆಚ್ಚಿನ ಮಾಹಿತಿಗಾಗಿ ಪೊಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ವಿಜಯಪುರ ಇವರ ಕಚೇರಿಯ ಸಮಯದಲ್ಲಿ ಭೇಟಿಯಾಗಿ ಮಾಹಿತಿ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಕೊಲ್ಹಾರದಲ್ಲಿ ಕೆಇಬಿ ಉಪವಿಭಾಗ ಕಚೇರಿ ಆರಂಭಕ್ಕೆ ನಾಗರಿಕರ ಒತ್ತಾಯ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ತಾಲೂಕು ಕೇಂದ್ರವಾಗಿ ಎಂಟು ವರ್ಷ ಗತಿಸುತ್ತಾ ಬಂದರೂ ಕೇಂದ್ರ ಸ್ಥಾನವಾದ ಕೊಲ್ಹಾರ ಪಟ್ಟಣದ ಹಾಗೂ ತಾಲೂಕು ವ್ಯಾಪ್ತಿಯ ಹಳ್ಳಿಗಳ ಸಾರ್ವಜನಿಕರು ರೈತಾಪಿ ವರ್ಗದವರು ವಿದ್ಯುತ್ ಸಮಸ್ಯೆಗಳ ಕುರಿತು ಮೇಲಾಧಿಕಾರಿಗಳ ಭೇಟಿಯಾಗಬೇಕಾದರೆ ದೂರದ ನಿಡಗುಂದಿ ಬಸವನ ಬಾಗೇವಾಡಿ ವಿಜಯಪೂರ ನಗರದಲ್ಲಿರುವ ಕಚೇರಿಗೆ ಅಲೆದಾಡುವುದು ತಪ್ಪುತ್ತಿಲ್ಲ.

ಪಟ್ಟಣದ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಸುಮಾರು ಒಂದು ಸಾವಿರಕ್ಕಿಂತಲೂ ಅಧಿಕವಾದ ಎಚ್.ಟಿ ಲೈನ್ ಮತ್ತು ಹದಿನೈದುನೂರು ಕಿ.ಮೀ ಉದ್ದದ ಎಚ್.ಟಿ ಲೈನ್‌ಗಳು ಹಾಯ್ದುಹೋಗಿದ್ದು ಅಂದಾಜು 32 ಸಾವಿರ ಸ್ಥಾವರಗಳನ್ನು ಹೊಂದಿದ ಕೊಲ್ಹಾರ ತಾಲೂಕು ಕೇಂದ್ರದಿಂದ ಹುಬ್ಬಳ್ಳಿ ವಿದ್ಯುತ್ ನಿಗಮ ನಿಯಮಿತ ಕಂಪನಿಗೆ ಸುಮಾರು 4 ಕೋಟಿ ರೂ.ಗಿಂತಲೂ ಪ್ರತಿ ತಿಂಗಳು ಅಧಿಕ ಆದಾಯ ಕೊಡುವ ಕೊಲ್ಹಾರ ಪಟ್ಟಣದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸೆಕ್ಷನ್ ಆಫಿಸ್‌ನ ಕಾರ್ಯ ರೈತರಿಗೆ ವರದಾನವಾಗದೇ ವಿದ್ಯುತ್ ಗ್ರಾಹಕರಿಗೆ ಸರಿಯಾದ ಸೌಲಭ್ಯ ಕೊಡುವಲ್ಲಿ ವಿಫಲವಾಗುವದನ್ನು ತಪ್ಪಿಸಲು ತಾಲೂಕು ಕೇಂದ್ರದಲ್ಲಿರುವ ಕಾರ್ಯ ಮತ್ತು ಪಾಲನಾ ಕಾರ್ಯನಿರ್ವಾಹಕ ಅಧಿಕಾರಿಗಳ ಉನ್ನತ ದರ್ಜೆಯ ಉಪವಿಭಾಗ ಕಚೇರಿ ಅತೀ ಅವಶ್ಯಕವಾಗಿದೆ.

ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ಭೂಪ್ರದೇಶವನ್ನು ಮತ್ತು ಒಂದು ಲಕ್ಷ ಹದಿನೆಂಟು ಸಾವಿರ ಜನಸಂಖ್ಯೆಯನ್ನು ಹೊಂದಿರುವ ತಾಲೂಕು ಕೇಂದ್ರದಲ್ಲಿ ಸುಮಾರು ನಾಲ್ಕು 110 ಕೆ.ವಿ ಸ್ಟೇಶನ್‌ಗಳು, 50 ಫೀಡರ್‌ಗಳ ಸಂಖ್ಯೆ, 3000 ಪರಿವರ್ತಕಗಳನ್ನು ಹೊಂದಿದ ಇನ್ನೂ ಅಧಿಕ ಸಂಪರ್ಕವನ್ನು ಪಡೆಯುವ ವಿದ್ಯುತ್ ಗ್ರಾಹಕರನ್ನು ಹಾಗೂ ಹಲವಾರು ಉದ್ಯಮಿಗಳು ತಮ್ಮ ಉದ್ಯಮಗಳನ್ನು ಸ್ಥಾಪಿಸಲು ಕೊಲ್ಹಾರ ಪಟ್ಟಣವನ್ನು ಆಯ್ಕೆಮಾಡಿಕೊಳ್ಳುತ್ತಿದ್ದು ಇಂಥಹ ಗ್ರಾಹಕರು ವಿದ್ಯುತ್ ಸಂಪರ್ಕದ ಸಲುವಾಗಿ ಅಧಿಕಾರಿಗಳನ್ನು ಸಂಪರ್ಕಿಸುವಾಗ ಈಗಿರುವ ಅಧಿಕಾರಿಗಳ ಕಚೇರಿಮೂಲಕ ಗ್ರಾಹಕರ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತಿಲ್ಲ ಕಾರಣ ಮೇಲಾಧಿಕಾರಿಗಳ ದರ್ಜೆಯ ಕಚೇರಿ ಇಲ್ಲಿ ಕಾರ್ಯನಿರ್ವಹಿಸದೇ ಇಲ್ಲದೇ ಇರುವದರಿಂದ ಆದ್ದರಿಂದ ಕೊಲ್ಹಾರ ಪಟ್ಟಣದಲ್ಲಿ ಇಂಧನ ಇಲಾಖೆಯ ಕಾರ್ಯ ಮತ್ತು ಪಾಲನಾ ಉಪ ವಿಭಾಗವನ್ನು ಹುದ್ದೆಗಳ ಸಮೇತ ಸರಕಾರವು ಮಂಜೂರು ಮಾಡಿ ಅನುಕೂಲ ಮಾಡಿಕೊಡಬೇಕು.

> "ನಿಡಗುಂದಿ ಉಪವಿಭಾಗದಲ್ಲಿ ಕೊಲ್ಹಾರ ತಾಲೂಕು ವ್ಯಾಪ್ತಿಯ ಹಳ್ಳಿಗಳನ್ನು ಮತ್ತು ಪಟ್ಟಣವನ್ನು ವಿದ್ಯುತ್ ಇಲಾಖೆಯವರು ಸೇರ್ಪಡೆ ಮಾಡಿ ಉಪವಿಭಾಗ ಕಚೇರಿ ಪ್ರಾರಂಬಿಸಿರುವದು ತಾಲೂಕಿನ ಜನತೆಗೆ ದ್ರೋಹ ಬಗೆದಂತೆ ಈಗಾಗಲೇ ಈ ಕುರಿತು ಹೆಸ್ಕಾಂ ಹುಬ್ಬಳ್ಳಿ ಕೇಂಧ್ರ ಕಚೇರಿಯ ಎಮ್.ಡಿ ಅವರಿಗೆ ಶಾಸಕ ಸಚಿವ ಶಿವಾನಂದ ಪಾಟೀಲ ಅವರಿಗೆ ಕೊಲ್ಹಾರ ಪಟ್ಟಣದಲ್ಲಿಯೇ ಹೆಸ್ಕಾಂ ಇಲಾಖೆಯ ಕಾರ್ಯ ಮತ್ತು ಪಾಲನಾ ಉಪವಿಭಾಗವನ್ನು ಪ್ರಾರಂಭಿಸಬೇಕೆಂದು ಹಲವಾರು ಮನವಿ ಸಲ್ಲಿಸಿದರೂ ಮಂಜೂರು ಮಾಡದೇ ಇರುವದು ಈ ಭಾಗದ ಮತದಾರರಿಗೆ ಅನ್ಯಾಯ ಮಾಡಿದಂತಾಗಿದ್ದು ಸಚಿವರು ಸಂಬಂಧಪಟ್ಟ ಇಲಾಖೆಯವರು ಎಚ್ಚೆತ್ತುಕೊಂಡು ವಿದ್ಯುತ್ ಇಲಾಖೆಗೆ ಆದಾಯ ಕೊಡುವ ಕೊಲ್ಹಾರ ಪಟ್ಟಣದಲ್ಲಿಯೇ ಉಪವಿಭಾಗ ಕಚೇರಿ ಪ್ರಾರಂಭಿಸಬೇಕು" ಎಂದು ತಾಲೂಕು ಹೋರಾಟ ಸಮೀತಿ ಅಧ್ಯಕ್ಷ ಈರನಗೌಡ ಬ ಕೋಮಾರ ಒತ್ತಾಯಿಸಿದ್ದಾರೆ.

## ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಿಢೀರ್ ಬೇಟಿ ನೀಡಿದ ಶಾಸಕ ಅಶೋಕ ಮನಗೂಳಿ

# ಪ್ರಾ.ಆರೋಗ್ಯ ಕೇಂದ್ರದ ವೈದ್ಯರ ಗೈರು :ಶಾಸಕರಿಂದ ಖಡಕ್ ವಾರ್ನಿಂಗ್!

**ಉದಯರಶ್ಮಿ ನ್ಯೂಸ್**

ಸಿಂದಗಿ: ಸಾರ್ವಜನಿಕ ಆಸ್ಪತ್ರೆಗೆ ಬೇಟಿ ನೀಡಿದ ಅವರು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಸರಿಯಾಗಿ ಹಾಜರಾಗುತ್ತಿಲ್ಲ. ಗೋಲಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ನಾಗಾವಿ ಕೇಂದ್ರದ ವೈದ್ಯಾಧಿಕಾರಿ ಆಸ್ಪತ್ರೆಗೆ ಮುಖವು ತೋರಿಸಿಲ್ಲ ನೀವೇನು ಮಾಡುತ್ತಿದ್ದಿರಾ ಎಂದು ತಾಲೂಕಾ ಆರೋಗ್ಯ ವೈದ್ಯಾಧಿಕಾರಿ ಡಾ.ಎ.ಎ.ಮಾಗಿ ಅವರಿಗೆ ಶಾಸಕ ಅಶೋಕ ಮನಗೂಳಿ ತರಾಟೆ ತೆಗೆದುಕೊಂಡರು.



ಉತ್ತರಿಸಿದ ವೈದ್ಯಾಧಿಕಾರಿ ಹೋಗುತ್ತಾರೆ ಎನ್ನುತ್ತಿದಂತೆ ದೂರವಾಣಿ ಮುಖಾಂತರ ಮಾತನಾಡಿ ಇದೀಗ ಎಲ್ಲಿದ್ದಾರೆ ಎಂದು ವಿಚಾರಿಸಿ ಎಂದು ಹೇಳಿದಾಗ ವೈದ್ಯರು ಕೆಲಸದ ನಿಮಿತ್ಯ ಆಸ್ಪತ್ರೆಯಲ್ಲಿ ಇಲ್ಲ ಎಂದು ವೈದ್ಯಾಧಿಕಾರಿ ಡಾ.ಎ.ಎ.ಮಾಗಿ ಅವರಿಗೆ ಉತ್ತರಿಸಿದರು. ನೀವೇ ನೋಡಿ ಅವರ ವಿರುದ್ದ ಕ್ರಮ ತೆಗೆದುಕೊಳ್ಳಿ ಇಲ್ಲವೇ ನಿಮ್ಮ ಮೇಲೆ ಕ್ರಮ ಅನಿವಾರ್ಯವಾಗುತ್ತದೆ. ಇದುವರೆಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ಯಾವ ಯಾವ ಚಿಕೀತ್ಸೆ ಲಭಿಸುತ್ತವೆ ಎಂಬ ಬಗ್ಗೆ ಜನರಿಗೆ ಗೋತ್ತಿಲ್ಲ. ಕಳೆದ ಒಂದು ವರ್ಷದಿಂದ ಜಾಗೃತಿ ಮೂಡಿಸುವ ಒಂದೇ ಒಂದು ಕಾರ್ಯಕ್ರಮ ನೀವು ಮಾಡಿಲ್ಲ. ಹೀಗಾದರೆ ಬಡ ಜನತೆ ಅದರ ಸದುಪಯೋಗ ಪಡೆದುಕೊಳ್ಳುವುದು ಹೇಗೆ ಎಂದು ಬೇಸರ ವ್ಯಕ್ತಪಡಿಸಿದರು.

ನಿಮ್ಮಲ್ಲಿ ಜನರಲ್ ಮೇಡಿಶಿನ್ ಓಪಿಡಿಗೆ ಕೇವಲ ಡಾ.ಬಡಿಗೇರ ಒಬ್ಬರೇ ನೋಡುತ್ತಿದ್ದು, ಬೇರೆ ವೈದ್ಯಾಧಿಕಾರಿಗಳು ಓಪಿಡಿ ನೋಡುತ್ತಿಲ್ಲ ಎಂಬ ದೂರುಗಳಿವೆ. ಏನು ಸಮಸ್ಯೆ ಎಂದಾಗ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಿ.ಕೆ.ಗುಂಡಬಾಡಿ ನಮ್ಮಲ್ಲಿ ಜನರಲ್ ಮೆಡಿಶಿನ್ ವೈದ್ಯರ ಇಲ್ಲ ಎಂದರು. ಹಾಗಾದರೆ ಇಲ್ಲ ಎಂದು ಮೇಲಾಧಿಕಾರಿಗಳಿಗೆ ಪತ್ರ ಬರದಿದ್ದಿರಾ ಪತ್ರ ನೀಡಿ ಎಂದಾಗ ಇಲ್ಲ ಬರೆದಿಲ್ಲ ಎಂದಾಗ ನಾವು ಕೇಳುವವರೆಗೂ ನೀವು ಆಸ್ಪತ್ರೆಯ ಬಗ್ಗೆ ಕಾಳಜಿ ವಹಿಸುವುದಿಲ್ಲ ಎಂದರೆ ಹೇಗೆ? ದಯಮಾಡಿ ಸಂಬಳಕ್ಕಾಗಿ ಮಾತ್ರ ಕೆಲಸ ಮಾಡಬೇಡಿ ನನ್ನದು ಕೇವಲ ಐದು ವರ್ಷದ ಅವಧಿ ನೀವು ಮಾಡಿದ ಕಾರ್ಯ ಬಡ ಜನತೆಗೆ ಅಜರಾಮರವಾಗಿ ಉಳಿಯುವಂತೆ ಮಾಡಬೇಕು ಹಾಗೂ ಕೂಡಲೇ ಮೇಲಾಧಿಕಾರಿಗಳಿಗೆ ಪತ್ರ ಬರೆಯಿರಿ ನಾನು ಬೇಟಿಯಾಗಿ ಸಿಬ್ಬಂದಿ ತರಲು ಪ್ರಯತ್ನ ಮಾಡುವೆ ಎಂದರು.

ಈ ಸಂದರ್ಭದಲ್ಲಿ ವೈದ್ಯರಾದ ಡಾ.ರಮೇಶ ರಾಠೋಡ, ಡಾ.ರಾಜಶೇಖರ ಸಿ.ಎಸ್, ಡಾ.ಸಾಯಬಣ್ಣ ಗುಣಕಿ, ಡಾ.ಮಂಜುನಾಥ ಅಂಜುಟಗಿ, ಡಾ.ಮಹಾಂತೇಶ ಹಿರೇಮಠ ಆಸ್ಪತ್ರೆಯ ಸಿಬ್ಬಂದಿಗಳು ಇದ್ದರು.

# ಅಭಿವೃದ್ಧಿ ಕಾರ್ಯಗಳಿಂದ ಜಿಗಜಿಣಗಿ ಗೆಲುವು :ಅಪ್ಪು ಪಟ್ಟಣಶೆಟ್ಟಿ

**ಉದಯರಶ್ಮಿ ನ್ಯೂಸ್**

ಇಂಡಿ: ಸಂಸದ ರಮೇಶ ಜಿಗಜಿಣಗಿ ಅವರ ಅಭಿವೃದ್ಧಿ ಕಾರ್ಯಗಳಿಗೆ ಮೆಚ್ಚಿ ಜಿಲ್ಲೆಯ ಜನರು ಮತ್ತೆ ಜಿಗಜಿಣಗಿ ಅವರ ಕೈ ಹಿಡಿದಿದ್ದಾರೆ. ಜಿಗಜಿಣಗಿ ಅವರು ಜಿಲ್ಲೆಯಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯ ಮಾಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಹೇಳಿದರು.



ಅವರು ಶುಕ್ರವಾರ ತಾಲೂಕಿನ ಬಳ್ಳೊಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಿಜೆಪಿ ಲೋಕಸಬಾ ಅಭ್ಯರ್ಥಿ ರಮೇಶ ಜಿಗಜಿಣಗಿ ಅವರು ಗೆಲುವು ಸಾಧಿಸಿದ್ದ ಪ್ರಯುಕ್ತ ಹಮ್ಮಿಕೊಂಡ ವಿಜಯೋತ್ಸವ ಸಮಾರಂಭದಲ್ಲಿ ಸಿಹಿ ಹಂಚಿ ಮಾತನಾಡಿದರು.

ಇಂಡಿ ಮತಕ್ಷೇತ್ರ ಸಂಸದ ಜಿಗಜಿಣಗಿ ಅವರ ತವರು ಕ್ಷೇತ್ರವಾಗಿದ್ದು ತವರಿನ ಜನ ರಮೇಶ ಜಿಗಜಿಣಗಿ ಅವರ ಕೈ ಹಿಡಿದು ಕಮಲ ಅರಳಿಸಿದ್ದಾರೆ. ಜಿಗಜಿಣಗಿ ಅವರು ಸಹ ಇಂಡಿ ಕ್ಷೇತ್ರದ ಬಗ್ಗೆ ಅಪಾರ ಕಾಳಜಿ ಹಾಗೂ ಗೌರವ ಹೊಂದಿದ್ದಾರೆ. ಹೀಗಾಗಿ ಈ ಬಾರಿ ಇಂಡಿ ಕ್ಷೇತ್ರದಲ್ಲಿಯೂ ಹೆಚ್ಚಿನ ಕೆಲಸ ಮಾಡಲಿ, ಅವರಿಗೆ ಕೇಂದ್ರದಲ್ಲಿ ಉನ್ನತ ಸ್ಥಾನಮಾನ ದೊರೆಯಲಿ ಎಂದು ಆಶಿಸುವುದಾಗಿ ತಿಳಿಸಿದರು.

ಬಿಜೆಪಿ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಕಾಪಸೆ ಮಾತನಾಡಿ, ಕೇಂದ್ರ ಸರಕಾರದ ಅಭಿವೃದ್ಧಿ ಕಾರ್ಯಗಳು ಹಾಗೂ ಸಂಸದ ಜಿಗಜಿಣಗಿ ಅವರು ಜಿಲ್ಲೆಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳಿಗೆ ಜನತೆ ಮನಸೋತು ಮತದಾನ ಮಾಡಿದ್ದಾರೆ. ಈ ಬಾರಿಯೂ ಬಿಜೆಪಿ ಸರಕಾರ ರಚನೆಯಾಗಲಿದ್ದು, ದೇಶ ಉತ್ತುಂಗಕ್ಕೇರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಂಭ್ರಮಾಚರಣೆಯಲ್ಲಿ ವಿಠ್ಠಲ ಶಿರಶ್ಯಾಡ, ಸದಾಶಿವ ರೇವತಗಾಂವ, ರವಿ ಹೂಗಾರ, ಸಿದ್ದಾರಾಮ ವಾಲಿ, ಶರಣಯ್ಯ ಮಠಪತಿ, ಸಿದ್ದು ತೇಲಿ, ಮಹಾದೇವ ಕದರಿ, ಅಶೋಕ ತೋಟದಾರ, ವಿಠ್ಠಲ ಕಾಗರ ಸೇರಿದಂತೆ ಮತ್ತಿತರರು ಇದ್ದರು.

# 18 ನೇ ದಿನ ಪೂರೈಸಿದ ಅಂಬೇಡ್ಕರ ಭವನ ಧರಣಿ ಸತ್ಯಾಗ್ರಹ

**ಉದಯರಶ್ಮಿ ನ್ಯೂಸ್**

ಯಪುರ ನಗರದ ಮನಗೂಳಿ ಅಗಸಿ ಬಡಾವಣೆಯ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಡಾ ಬಿ ಆರ್ ಅಂಬೇಡ್ಕರ್ ಯುವಕ ಸಂಘದಿಂದ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಶುಕ್ರವಾರ 18ನೇ ದಿನ ಪೂರೈಸಿದೆ.



ಗುರುವಾರ ಸಂಜೆ ಮುಖಂಡರು ರಕ್ತದಲ್ಲಿ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರ ನೀಡಿ ಬೇಗನೆ ಸಮಸ್ಯೆ ಇತ್ಯರ್ಥಗೊಳಿಸುವಂತೆ ಮನವಿ ಮಾಡಿಕೊಳ್ಳಲು ಹೋದಾಗ ಜಿಲ್ಲಾಧಿಕಾರಿಗಳು ಪ್ರತಿಭಟನಾ ನಿರತರ ಮನವಿ ಸ್ವೀಕರಿಸಲು ನಿರಾಕರಿಸಿದಾಗ ದಲಿತ ಮುಖಂಡರು ಜಿಲ್ಲಾಧಿಕಾರಿಗಳು ರಕ್ತದಲ್ಲಿ ಬರೆದ ಮನವಿಯನ್ನು ಸ್ವೀಕರಿಸುವಂತೆ ಪಟ್ಟು ಹಿಡಿದಾಗ ಪೊಲೀಸರು, ಜಿಲ್ಲಾಧಿಕಾರಿ ಕಚೇರಿ ಸಿಬ್ಬಂಧಿಗಳ ಹಾಗೂ ಧರಣಿ ನಿರತರ ಮಧ್ಯ ಕೆಲಕಾಲ ಮಾತಿನ ಚಕಮಕಿ ನಡೆಯಿತು.

ಈ ಸಂದರ್ಭದಲ್ಲಿ ಮುಖಂಡ ಬಸವಕುಮಾರ ಕಾಂಬಳೆ ಅವರು ಮಾತನಾಡಿ, ಜಿಲ್ಲಾಧಿಕಾರಿಗಳು ನಮಗೆ ಎರಡು ದಿನದಲ್ಲಿ ಜಾಗವನ್ನು ಮಂಜೂರು ಮಾಡಿ ಆದೇಶ ಪತ್ರ ನೀಡುತ್ತೇನೆ ಎಂದು ಭರವಸೆ ನೀಡಿದ್ದರು. ಅವರ ಮಾತನ್ನು ನಂಬಿ ಕಳೆದ ಆದರೆ ಈಗ ಭರವಸೆ ಹುಸಿಯಾಗಿದೆ. ಜಿಲ್ಲಾಧಿಕಾರಿಗಳು ಕಾಣದ ಕೈಗಳ ಕೈಗೊಂಬೆಯಂತೆ ವರ್ತಿಸುವ ಮೂಲಕ ದಲಿತರಿಗೆ ಅನ್ಯಾಯವೆಸಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೋರ್ವ ಮುಖಂಡ ಸತೀಶ ಕುಬಕಡ್ಡಿ ಅವರು ಮಾತನಾಡಿ, ದಲಿತರು ಬೀದಿಯಲ್ಲಿ ನಿಂತು ಅಹೋರಾತ್ರಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದರು ಕೂಡಾ ಜಿಲ್ಲಾಡಳಿತ ದಿವ್ಯ ನಿರ್ಲಕ್ಷ ವಹಿಸುವ ಮೂಲಕ ದಲಿತರ ಬದುಕನ್ನು ಬೀದಿಗೆ ತಂದದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯುವ ಮುಖಂಡ ಪ್ರತಾಪ ಚಿಕ್ಕಲಕಿ ಮಾತನಾಡಿ, ಜಿಲ್ಲಾಧಿಕಾರಿಗಳು ನಮಗೆ ನೀಡಿದ ಭರವಸೆಯನ್ನು ನಂಬಿ ನಾವು ಧರಣಿ ಸತ್ಯಾಗ್ರಹ ನಡೆಸುತ್ತಿದ್ದೇವೆ. ಆದರೆ ಜಿಲ್ಲಾಧಿಕಾರಿಗಳು ನಮಗೆ ಕೊಟ್ಟ ಮಾತನ್ನು ಮರೆತು ನಮಗೆ ನ್ಯಾಯ ಒದಗಿಸುವಲ್ಲಿ ವಿಫಲರಾಗಿದ್ದಾರೆ. ಕೂಡಲೇ ನಮಗೆ ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ಶ್ರೀಶೈಲ ಕಾಖಂಡಕಿ, ಪ್ರದೀಪ ಚಲವಾದಿ, ಬಸವರಾಜ ಕುಬಕಡ್ಡಿ, ಕೀರ್ತಿ ಕಾಖಂಡಕಿ, ರವಿ ಕಾಖಂಡಕಿ, ಶಂಕರ ಕಾಖಂಡಕಿ, ರೋಹಿತ ಮಲಕಣ್ಣವರ, ಸಚಿನ ಕಾಖಂಡಕಿ, ಶೇಖರ ಕೂಡಗಿ, ರಾಜು ಕಾಖಂಡಕಿ, ಮಂಜುನಾಥ ಶಿವಶರಣ, ರಾಮಣ್ಣ ಕಾಖಂಡಕಿ, ಅರವಿಂದ ಕಾಖಂಡಕಿ, ಕೃಷ್ಣಾ ಚಲವಾದಿ, ಸಚಿನ ಕಾಖಂಡಕಿ, ಕೀರ್ತಿ ಕುಮಾರ ಕಾಖಂಡಕಿ, ಕಿರಣ ಕಾಖಂಡಕಿ, ರಾಕೇಶ ಕಾಖಂಡಕಿ, ಬಾಬಾಸಾಹೇಬ ಶಿವಶರಣ, ಆಕಾಶ ಕಾಂಬಳೆ, ಸತೀಶ ಚಲವಾದಿ, ಮಧು ಕಾಖಂಡಕಿ, ರುಕ್ಮಿಣಿ ಕಾಖಂಡಕಿ, ಆಶಾ ಮಾನೆ, ಸರೋಜಾ ಕುಬಕಡ್ಡಿ, ಸುನಂದಾ ಕಾಖಂಡಕಿ, ಕಾವೇರಿ ವಾಲಿಕಾರ, ಮಲ್ಲಮ್ಮ ಚಲವಾದಿ, ಪ್ರತಿಭಾ ಕಾಖಂಡಕಿ, ಬಸವರಾಜ ಕಾಖಂಡಕಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಚಲವಾದಿ ಸಮಾಜದಿಂದ ಬುದ್ಧ-ಬಸವ-ಅಂಬೇಡ್ಕರ ಜಯಂತಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಮಮದಾಪುರ ಗ್ರಾಮದಲ್ಲಿ ಚಲವಾದಿ ಸಮಾಜದ ವತಿಯಿಂದ ಬುದ್ಧ, ಬಸವ, ಅಂಬೇಡ್ಕರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿಯಲ್ಲಿ 95% ಕ್ಕಿಂತ ಹೆಚ್ಚಿಗೆ ಅಂಕ ಪಡೆದ ಪ್ರತಿಭಾವಂತ 8 ಜನ ಮಕ್ಕಳಿಗೆ ಅದ್ದೂರಿಯಾಗಿ ಸನ್ಮಾನಿಸಲಾಯಿತು. ಇದೇ ಸಮಯದಲ್ಲಿ ಸಂಪೂರ್ಣ ಮದ್ಯಪಾನ ತ್ಯಜಿಸಿ ಮುಖ್ಯವಾಹಿನಿಗೆ ಬಂದ 1) ಪುಂಡಲಿಕ ಶೇಗುಣಸಿ 2) ಚಿದಾನಂದ ಚಲವಾದಿ ಇವರಿಗೂ ವಿಶೇಷ ಸನ್ಮಾನಿಸಲಾಯಿತು ಮತ್ತು ಎಸ್.ಎ. ವಿದ್ಯಾರ್ಥಿ ಗಂಗಾಧರ ಈತನು ಐ.ಐ.ಃ ಪಾಸಾಗಿ ವಕೀಲನಾಗಿದ್ದಕ್ಕಾಗಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತಾಡಿದ ಎಸ್.ಎ. ಬಡ ವಿದ್ಯಾರ್ಥಿನಿ ಸೈನಿಕನ ಮಗಳಾದ ಭುವನೇಶ್ವರಿ ಕಟ್ಟಿಮನಿ ನಾನು 2022ರಲ್ಲಿ ಸರಕಾರಿ ಶಾಲೆ ಕಾರಜೋಳ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಿಂದ 99.84 ಅಂಕ ಪಡೆದು ರಾಜ್ಯಕ್ಕೆ 2 ನೇ ರ್‍ಯಾಂಕ್ ಗಳಿಸಿದರೂ ನನಗೆ ಸರಕಾರದಿಂದ ಮತ್ತು ಜಿಲ್ಲಾಡಳಿತದಿಂದ ಬಹುಮಾನವೂ ಇಲ್ಲ. ಸನ್ಮಾನವೂ ಇಲ್ಲ, ಯಾಕೆಂದರೆ ನಾನು ಎಸ್.ಸಿ. ವಿದ್ಯಾರ್ಥಿನಿ. ಆದರೆ ಈ ವರ್ಷ ನನ್ನಂತೆ ಮೇಲ್ವರ್ಗದ ಅಂಕಿತಾ ಕೊಣ್ಣೂರ ಬಾಗಲಕೋಟೆ ಜಿಲ್ಲೆಯಿಂದ ಸರಕಾರಿ ಶಾಲೆಯಿಂದ S.S.L.C. ಯಲ್ಲಿ ರಾಜ್ಯಕ್ಕೆ 1ನೇ ರಾಂಕ 100ಕ್ಕೆ 100 ಅಂಕ ಪಡೆದು ಪಾಸಾಗಿದ್ದಕ್ಕಾಗಿ ಮುಖ್ಯಮಂತ್ರಿಗಳಿಂದ. ಉಪ ಮುಖ್ಯಮಂತ್ರಿ, ಸಮಾಜ ಕಲ್ಯಾಣ ಮಂತ್ರಿ ಅನೇಕರಿಂದ 50 ಲಕ್ಷದವರೆಗೆ ಬಹುಮಾನ ಸನ್ಮಾನ ಹರಿದು ಬರುತ್ತಲೇ ಇದೆ.

ಈ ರೀತಿ S.C.(ಚಲವಾದಿ) ವಿದ್ಯಾರ್ಥಿನಿಗೊಂದು ಮೇಲವರ್ಗದ ವಿದ್ಯಾರ್ಥಿನಿಗೊಂದು ಸರಕಾರವೇ ಕುಳಿತು ಭೇದಭಾವ ಮಾಡಬಾರದೆಂದು ತನ್ನ ನೋವು ತೋಡಿಕೊಂಡು ಕಣ್ಣೀರು ಹಾಕಿದಳು.




ಅಧ್ಯಕ್ಷ ಸ್ಥಾನ ವಹಿಸಿ ಮಾತಾಡಿದ ಮಹಾವಿದ್ಯಾಲಯದ ಅಧ್ಯಕ್ಷ ಕೃಷ್ಣಾಜಿ ಕುಲಕರ್ಣಿಯವರು ಈ ಚಲವಾದಿ ವಿದ್ಯಾರ್ಥಿನಿಗೆ ನಿನ್ನ ನೋವನ್ನು ನಾನು ಬೃಹತ್ ಕೈಗಾರಿಕೆ ಮತ್ತು ವಿಜಯಪುರ ಉಸ್ತುವಾರಿ ಮಂತ್ರಿ ಎಮ್. ಬಿ. ಪಾಟೀಲ ಸಾಹೇಬರು ಕೂಡ ಮಾತಾಡಿ ನಿನಗೆ ಸರಕಾರದಿಂದ ಸಹಾಯ ಸಿಗುವಂತೆ ಮಾಡುತ್ತೇನೆಂದು ಭರವಸೆ ಕೊಟ್ಟು ವಿದ್ಯಾರ್ಥಿನಿಯನ್ನು ಸಮಾಧಾನ ಪಡಿಸಿದರು. 95% ಕಿಂತ ಹೆಚ್ಚು ಅಂಕ ಪಡೆದ 8 ವಿದ್ಯಾರ್ಥಿಗಳಿಗೆ ತಮ್ಮ ಕ.ಆ.ಎ. ಮಹಾವಿದ್ಯಾಲಯದಲ್ಲಿ ಉಚಿತವಾಗಿ ಎಡಿಶನ್ ಕೊಡಿಸುವುದಾಗಿ ಭರವಸೆ ನೀಡಿದರು.

ಸಂತೋಷ ಶಾಪೂರ, ಬಸವರಾಜ ಚಲವಾದಿ ಉಪನ್ಯಾಸ ನೀಡಿದರು. ಸಭೆಯಲ್ಲಿ ರಿಗೆ ಸುಪರಿಡೆಂಟ ಇಂಜಿನೀಯರ ಮಧ್ವಾಚಾರ್ಯ ಕುಲಕರ್ಣಿ, ಬಸು ಸಾವಕಾರ ಗಲಗಲಿ, ಶ್ರೀ ಸದಾಶಿವಯ್ಯ ಖಾಕಂಡಕಿಮಠ, ಎಚ್. ಎಮ್. ಪುರೋಹಿತ ಮತ್ತು ಜಯಂತಿಯ ರೂವಾರಿ, ಸಾಬೂ ಚಲವಾದಿ, ಮುತ್ತೇಶ ಗಡ್ಡದಮಠ, ರಾಮಜಿ ಅವಟಿ, ಕೃಷ್ಣಾ ಕಟ್ಟಿಮನಿ, ಶ್ರೀಶೈಲ ಕಟ್ಟಿಮನಿಹುಸೇನಿಕೀಜ, ಶಾಮನಾಯಕ, ರುಕ್ಕೋದ್ದೀನ ಕಾಗಿ, ಲಕ್ಷ್ಮೀಕಾಂತ ಮಮದಾಪುರ ಬಾಬು ಶೇಗವಾಸಿ, ಚನ್ನಪ್ಪ ಕಟ್ಟಿಮನಿ ಅನೇಕರು ಹಾಜರಿದ್ದರು.

ಸುಜಾತಾ ಚಲವಾದಿ ಆರೋಗ್ಯ ಇಲಾಖೆ ಸ್ವಾಗತ ಗೀತೆ ಹಾಡಿದರು. ಮಲ್ಲು ಚಲವಾದಿ ಶಿಕ್ಷಕರು ನಿರೂಪಣೆ ಮಾಡಿದರು. ಸಾಬೂ ಚಲವಾದಿ ವಂದಿಸಿದರು.

# ಇಂಡಿ ಶಹರ ಪೋಲಿಸ್ ಠಾಣಾ ವ್ಯಾಪ್ತಿ ಹೆಚ್ಚಿಸಲು ಮನವಿ

**ಉದಯರಶ್ಮಿ ನ್ಯೂಸ್**

ಇಂಡಿ: ಶಹರ ಪೊಲಿಸ್ ಠಾಣಾ ವ್ಯಾಪ್ತಿ ಹೆಚ್ಚಿಸಲು ಪುರಸಭೆ ಮಾಜಿ ಅಧ್ಯಕ್ಷ ಯಮುನಾಜಿ ಸಾಳೆಂಕೆ ಜಿಲ್ಲಾ ಪೊಲೀಸ್ ವರಿಷ್ಠ ಅಧಿಕಾರಿಗಳಿಗೆ ಮನವಿ ಮಾಡಿದರು.




ಬುಧವಾರ ಶಹರ ಪೋಲಿಸ್ ಠಾಣಾದಲ್ಲಿ ಆಯೋಜಿಸಿದ್ದ ಬಕ್ರೀದ್ ಹಾಗೂ ಚೌಡಮ್ಮ ಜಾತ್ರೆ ನಿಮಿತ್ಯ ಶಾಂತಿ ಸಭೆಯಲ್ಲಿ ಮಾತನಾಡಿದರು.

ಪಟ್ಟಣದಿಂದ ಸುಮಾರು 10 ಕಿಮೀ ವ್ಯಾಪ್ತಿಯ ಬರುವ ಹಳ್ಳಿಗಳು ಶಹರ ಪೋಲಿಸ್ ಠಾಣೆಗೆ ಸೇರ್ಪಡೆಗೊಳಿಸಿ ಶಹರ ಪೋಲಿಸ್ ಠಾಣೆಗೆ ಮೆರಗು ತರಬೇಕು. ಈ ಹಿಂದೆ ಶಹರ್ ಮತ್ತು ಗ್ರಾಮೀಣ ಠಾಣೆ ಒಂದೇಯಾಗಿತ್ತು. ಇತ್ತೀಚೆಗೆ ಅಪರಾಧ ಚಟುವಟಿಕೆಗಳು ಮತ್ತು ಆಡಳಿತದ ಹಿತದೃಷ್ಟಿಯಿಂದ ಗ್ರಾಮೀಣ ಮತ್ತು ಶಹರ ಠಾಣೆ ಎಂದು ಇಬ್ಬಾಗ ಮಾಡಲಾಗಿದೆ. ಆದರೆ ಆಡಳಿತ ಹಿತ ದೃಷ್ಟಿಯಿಂದ ಶಹರ್ ಠಾಣೆಗೆ ಇನ್ನೊಂದಿಷ್ಟು ಹಳ್ಳಿಗಳು ಸೇರ್ಪಡೆ ಮಾಡುವುದರಿಂದ ಒಳ್ಳೆಯದು ಆಗುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಭೀಮನಗೌಡ ಪಾಟೀಲ, ಸತೀಶ ಕುಂಬಾರ, ಅಯೂಬ್ ನಾಟೀಕಾರ ಮಾತನಾಡಿ, ಪಟ್ಟಣ ಶಾಂತಿ ಸೌಹಾರ್ದತೆಗೆ ಹೆಸರುವಾಸಿಯಾಗಿದೆ. ಹಾಗಾಗಿ ಯಾವುದೆ ಕಾರಣಕ್ಕೂ ಕೆಟ್ಟ ಹೆಸರು ತರಲು ಅವಕಾಶ ಮಾಡಿಕೊಡುವುದಿಲ್ಲ ಎಂದು ಹೇಳಿದರು.

ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿದ ಶಹರ್ ಪೋಲಿಸ್ ಠಾಣಾ ಸಿಪಿಐ ರತನಕುಮಾರ ಜಿರಗ್ಯಾಳ ಮಾತನಾಡಿ, ಯಾವುದೇ ಸಮುದಾಯವಾಗಿರಲಿ ಹಬ್ಬಗಳ ಆಚರಣೆ ವೇಳೆ ಅನ್ಯ ಧರ್ಮದ ಬಗ್ಗೆ ತಾತ್ಸಾರ ಮಾಡದೆ, ಶಾಂತಿಯುತವಾಗಿ ಆಚರಿಸಿದಾಗ ಮಾತ್ರ ಸಹಭಾಳ್ವೆ ಸಾಧ್ಯ. ಹೀಗಾಗಿ ಶಾಂತಿ ಭಂಗ ತರುವ ಯಾವುದೇ ಹೇಳಿಕೆಗಳು. ಸಾಮಾಜಿಕ ಜಾಲ ತಾಣಗಳಲ್ಲಿ ಪೋಸ್ಟ್ ಮಾಡುವುದು, ಫಾರ್ವಡ್ ಮಾಡಿ ಮತ್ತೊಬ್ಬರಿಗೆ ನೋವುಂಟು ಮಾಡುವುದು ಕಾನೂನಿನಲ್ಲಿ ಅಪರಾಧವಾಗಿದ್ದು, ಸಭೆಯಲ್ಲಿನ ಮುಖಂಡರು ಯುವಕರಿಗೆ ತಿಳಿ ಹೇಳಬೇಕು ಎಂದ ಅವರು ಕಾನೂನು ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ರೈಸ್ ಅಷ್ಟೇಕರ, ಶ್ರೀಧರ ಕ್ಷೇತ್ರಿ, ಮಲ್ಲು ದೇವರ ಹಾಗೂ ಶಹರದ ಮುಖಂಡರು, ಪೋಲಿಸ್ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

> "ಸಹಬಾಳ್ವೆ, ಸೌಹಾರ್ದತೆಗೆ ದಕ್ಕೆ ತಂದರೆ, ಪಟ್ಟಣದಲ್ಲಿ ಅಶಾಂತಿಗೆ ಕಾರಣವಾದರೆ ಹಾಗೂ ಕಾನೂನು ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತದೆ."
>
> **– ರತನಕುಮಾರ ಜಿರಗ್ಯಾಳ,** ಶಹರ್ ಪೋಲಿಸ್ ಠಾಣಾ ಸಿಪಿಐ

# ಜೂ.9ಕ್ಕೆ ಪ್ರೊ. ಬಿ.ಕೆ. ಸಂಘರ್ಷ ದಿನಾಚರಣೆ


**ಉದಯರಶ್ಮಿ ನ್ಯೂಸ್**

ವಿಜಯಪುರ: ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಪ್ರೊ. ಬಿ. ಕೃಷ್ಣಪ್ಪರ 88ನೇ ಜನ್ಮ ದಿನಾಚರಣೆಯ ಅಂಗವಾಗಿ ಪ್ರೊ. ಬಿ.ಕೆ. ಸಂಘರ್ಷ ದಿನ ಎಂಬ ಘೋಷವಾಕ್ಯದೊಂದಿಗೆ ಜೂ. 9 ರಂದು ಬೆಳಗ್ಗೆ 11:30 ಕ್ಕೆ ಪುರಭವನದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿಜಯಪುರ ಜಿಲ್ಲಾ ಪ್ರಧಾನ ಸಂಚಾಲಕರಾದ ಸಂಜು ವೈ. ಕಂಬಾಗಿ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾ ಪ್ರಕಟಣೆ ನೀಡಿದ ಅವರು, ಶೋಷಿತ ಸಮುದಾಐಗಳ ಹೋರಾಟಗಾರ, ದಲಿತ ಚೇತನ ಬಿ. ಕೃಷ್ಣಪ್ಪ ಭದ್ರಾವತಿಯಲ್ಲಿ ಆರಂಭಮಾಡಿದ ಚಳವಳಿ, ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿ ಲಕ್ಷಾಂತರ ತಳ ಸಮುದಾಯ ಬಡವರ ವಿಮೋಚನೆಗಾಗಿ ದಸಂಸ ಹೋರಾಟ ಮಾಡುತ್ತಾ ಬಂದಿದೆ ಎಂದರು.

ಕೃಷ್ಣಪ್ಪ ತಮ್ಮ ಬದುಕಿನುದ್ದಕ್ಕೂ ಸರಳ ಜೀವನ ನಡೆಸಿದ್ದಾರೆ. ರಾಜಕೀಯವಾಗಿ ಶೋಷಿತರು ಸಬಲಾಗಬೇಕೆನ್ನುವ ಕನಸು ಹೊಂದಿದ್ದರು. ಜಾತೀಯತೆ, ಅಸ್ಪೃಶ್ಯತೆ, ವರ್ಗ ಅಸಮಾನತೆಗಳ ವಿರುದ್ಧ ಹೋರಾಟ ರೂಪಿಸಿದವರು. ಇಂದು ದಲಿತ ಶೋಷಿತ ಸಮುದಾಯದವರಿಗೆ ಅಲ್ಪ-ಸ್ವಲ್ಪ ಭೂಮಿ ಸಿಕ್ಕಿದೆ ಎಂದರೆ ಅದು ಬಿ. ಕೃಷ್ಣಪ್ಪರ ಹೋರಾಟದಿಂದಲೇ ಎಂದರು.

ವಿಜಯಪುರ ಜಿಲ್ಲೆಯಿಂದ 100 ಕ್ಕೂ ಹೆಚ್ಚು ಜನ ಕಾರ್ಯಕರ್ತರು ರೇಲ್ವೆ ಮುಖಾಂತರ ಬೆಂಗಳೂರಿನ ಕಾರ್ಯಕ್ರಮಕ್ಕೆ ತೆರಳಿಲಿದ್ದಾರೆ. ಅತಿ ಹೆಚ್ಚು ಕಾರ್ಯಕರ್ತರು ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.




ಈ ಕಾರ್ಯಕ್ರಮದಲ್ಲಿ ಸಚಿವರಾದ ಸತೀಶ ಜಾರಕಿಹೋಳಿ, ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ. ಎಚ್.ಸಿ. ಮಹಾದೇವಪ್ಪ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ಅಧ್ಯಕ್ಷ ಇಂದಿರಾ ಕೃಷ್ಣಪ್ಪ, ಉಪನ್ಯಾಸಕ ಡಾ. ಸಿ.ಜಿ. ಲಕ್ಷ್ಮೀಪತಿ, ದಸಂಸ ರಾಜ್ಯ ಪ್ರಧಾನ ಸಂಚಾಲಕರಾದ ಮಾವಳ್ಳಿ ಶಂಕರ, ದಸಂಸ ಪದಾಧಿಕಾರಿಗಳಾದ ರಮೇಶ ಡಾಕುಳುಕಿ, ಎನ್. ನಾಗರಾಜ್ ಹಾಗೂ ಉಪ ಪ್ರಧಾನ ಸಂಚಾಲಕರಾದ ನಾಗಣ್ಣ ಬಡಿಗೇರ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಸಂಜು ಕಂಬಾಗಿ ತಿಳಿಸಿದ್ದಾರೆ.

# ಬಾಲಕೀಯರ ವಸತಿ ನಿಲಯದಲ್ಲಿ ವಿಶ್ವ ಪರಿಸರ ದಿನಾಚರಣೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದ ಕನಕದಾಸ ಬಡಾವಣೆಯ ಹತ್ತಿರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕೀಯರ ವಸತಿ ನಿಲಯಕ್ಕೆ ಇಂದು ಜಿಲ್ಲಾಧಿಕಾರಿ ಟಿ.ಬೂಬಾಲನ್ ಭೇಟಿ ನೀಡಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಪರಿಸರದ ಮಹತ್ವದ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಜಿಲ್ಲೆಯಲ್ಲಿ ಸುಮಾರು 101 ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು ಎಲ್ಲ ವಸತಿ ನಿಲಯಗಳಲ್ಲಿ ಗಿಡ ಮರಗಳನ್ನು ಬೆಳೆಸಬೇಕು ಹಾಗೂ ಅವುಗಳನ್ನು ಸಂರಕ್ಷಿಸಬೇಕು ಗಿಡಮರಗಳು ನಮಗೆ ಉತ್ತಮ ಗಾಳಿ, ಪರಿಸರ, ನೆರಳು ಹಾಗೂ ಉತ್ತಮ ಆರೋಗ್ಯವನ್ನು ಒದಗಿಸುತ್ತವೆ ನಾವೆಲ್ಲರೂ ಗಿಡ ಮರಗಳನ್ನು ಬೆಳೆಸೋಣ ಉಳಿಸೋಣ ಎಂದು ಅವರು ಹೇಳೀದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅಶೋಕ ಕಲ್ಯಾಣಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮೆಹಬೂಬ ತುಂಬರಮಟ್ಟಿ, ಹಾಗೂ ಇಲಾಖೆಯ ಇತರೇ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು

# ಮಹಿಳೆ ಕಾಣೆ: ಪ್ರಕರಣ ದಾಖಲು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ವಿದ್ಯಾನಗರದ ನಿವಾಸಿ ಕಾಂಚನಾ ಪತ್ತಾರ ಕಾಣೆಯಾದ ಬಗ್ಗೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಧಾರಣ ಮೈ, ದುಂಡು ಮುಖ, ಬಿಳಿ ಬಣ್ಣ, ಎತ್ತರಕ್ಕೆ 4.10 ಫೂಟ್ ಇದ್ದು ಕನ್ನಡ, ಇಂಗ್ಲೀಷ್, ಹಿಂದಿ ಭಾಷೆಗಳನ್ನು ಓದಲು ಬರೆಯಲು ಬರುತ್ತದೆ. ಮೇ25 ರಂದು ಸಂಜೆ 5ಗಂಟೆಗೆ ಹಳದಿ ಬಣ್ಣದ ಚೂಡಿದಾರ ಧರಿಸಿ ಮನೆಯಿಂದ ಕೋಚಿಂಗ್‌ಗೆ ಹೋಗುತ್ತೇನೆ ಅಂತಾ ಹೇಳಿ ಹೋದವಳು ಇಲ್ಲಿಯವರೆಗೆ ಮನೆಗೆ ವಾಪಸ್ ಬರದೇ ತನ್ನ ಮೊಬೈಲ್ ಫೋನ್ ಸ್ವಿಚ್‌ಆಫ್ ಮಾಡಿಕೊಂಡು ಎಲ್ಲಯೋ ಕಾಣೆಯಾಗಿದ್ದು ಹುಡುಕಿ ಕೊಡುವಂತೆ ಆಕೆಯ ತಂದೆ ವಿರುಪಾಕ್ಷಿ ಪತ್ತಾರ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿದೆ.

ಉದಯರಶ್ಮಿ
ಪ್ರತಿ ಮನೆ-ಮನದ ಸಂಗಾತಿ

# ಜನರನ್ನು ರೋಮಾಂಚನಗೊಳಿಸಿದ ವಿವಿಧ ಕಸರತ್ತಿನ ಸ್ಪರ್ಧೆಗಳು



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಇವಣಗಿ ಗ್ರಾಮದ ಆರಾಧ್ಯದೈವ ವರದಾನಿ ಲಕ್ಕಮ್ಮದೇವಿ ಜಾತ್ರಾಮಹೋತ್ಸವದಂಗವಾಗಿ ಶುಕ್ರವಾರ ಭಾರ ಎತ್ತುವ ಸ್ಪರ್ಧೆ ಸೇರಿದಂತೆ ವಿವಿಧ ಕಸರತ್ತಿನ ಸ್ಪರ್ಧೆಗಳು ನೋಡುಗರನ್ನು ರೋಮಾಂಚನಗೊಳಿಸಿದವು.

ಜಾತ್ರೆಯಂಗವಾಗಿ ಬೆಳಗ್ಗೆ ಜರುಗಿದ ಭಾರ ಎತ್ತುವ ಸ್ಪರ್ಧೆ ಹಾಗೂ ಗುಂಡು, ಸಂಗ್ರಾಣಿ ಕಲ್ಲು, ಚೀಲ ಎತ್ತುವ ಸ್ಪರ್ಧೆಯಲ್ಲಿ ವಿವಿಧೆಡೆಗಳಿಂದ ಆಗಮಿಸಿದ್ದ ಜಟ್ಟಿಗಳು ಭಾಗವಹಿಸಿದ್ದರು. ಮಧ್ಯಾನ್ಹ ಜರುಗಿದ ಜಂಗೀ ಕುಸ್ತಿ ಸ್ಪರ್ಧೆಯಲ್ಲಿಯೂ ವಿವಿಧೆಡೆಗಳಿಂದ ಆಗಮಿಸಿದ್ದ ಜಟ್ಟಿಗಳು ಭಾಗವಹಿಸಿದ್ದರು. ಈ ಎರಡು ಸ್ಪರ್ಧೆಗಳನ್ನು ವೀಕ್ಷಿಸಲು ಬಂದಿದ್ದ ಜನರು ಕೇಕೇ, ಚಪ್ಪಾಳೆ ಹಾಕಿ ಜಟ್ಟಿಗಳನ್ನು ಹುರಿದುಂಬಿಸಿದರು. ಕೆಲ ಸ್ಪರ್ಧೆಗಳು ಜನರನ್ನು ರೋಮಾಂಚನಗೊಳಿಸಿದವು. ಎಲ್ಲ ಸ್ಪರ್ಧೆಯಲ್ಲಿ ವಿಜೇತ–ರಿಗೆ ಜಾತ್ರಾಮಹೋತ್ಸವ ಸಮಿತಿಯಿಂದ ಬಹುಮಾನ ನೀಡಿ ಸನ್ಮಾನಿಸಲಾಯಿತು. ಜಾತ್ರೆಯಂಗವಾಗಿ ರಾತ್ರಿ 9 ಗಂಟೆಗೆ ಇವಣಗಿಯ ಬಸವ ಚೇತನ ಕಲಾ ಬಳಗದಿಂದ ಹಿರಿತನದ ಹೆಣ್ಣು ಸಾಮಾಜಿಕ ನಾಟಕ ಪ್ರದರ್ಶನವಾಯಿತು.

# ನವೀಕರಣಗೊಂಡಿವೆ ನಾಯಕನ ಕೌಶಲ್ಯಗಳು

**ಉದಯರಶ್ಮಿ ದಿನಪತ್ರಿಕೆ**

– ಪ್ರೊ.ಧರ್ಮರಾಜ ಕುಂಬಾರ
ಉಪನ್ಯಾಸಕರು ಮತ್ತು ಉದ್ಯೋಗ ತರಬೇತಿ ಅಧಿಕಾರಿ



ಜಗತ್ತು ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ, ಜಗತ್ತಿನ ಯಾವುದೇ ಒಂದು ಕ್ಷೇತ್ರದಿಂದ ತೆಗೆದುಕೊಂಡರು ಸಹ ಅಲ್ಲಿ ನಾಯಕನಿಗಾಗಿ ಒಂದು ವಿಶೇಷ ಸ್ಥಾನವಿದೆ. ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಈ ಸಂದರ್ಭದಲ್ಲಿ, ನಾಯಕನ ಸ್ಥಾನಕ್ಕೆ ಅತಿ ಹೆಚ್ಚಿನ ಮಹತ್ವ ಬಂದಿದೆ. ಇದರ ಬಗ್ಗೆ ವಿಶ್ಲೇಷಣೆ ಮಾಡಿದಾಗ ನಮಗೆ ತಿಳಿಯುವುದು ಏನೆಂದರೆ ಯಾವ ರೀತಿಯ ನಾಯಕ ನಮಗೆ ಬೇಕು, ನಾಯಕನಲ್ಲಿ ಎಷ್ಟು ಪ್ರಕಾರಗಳು?.

ನಾಯಕನಲ್ಲಿ ಪ್ರಕಾರಗಳು ಇಲ್ಲ ಕೆಟ್ಟ ನಾಯಕ, ಒಳ್ಳೆಯ ನಾಯಕ, ಬುದ್ಧಿವಂತ ನಾಯಕ ಎಂಬ ವಿಧಗಳು ಇಲ್ಲ. ನಾಯಕ ಎಂದ ಮೇಲೆ ನಾಯಕ ಅಷ್ಟೇ. ಆದರೆ ಬದಲಾವಣೆಗೊಳ್ಳುತ್ತಿರುವ ಈ 21ನೇ ಶತಮಾನದಲ್ಲಿ ನಾಯಕನಿಗೆ ಇರಬೇಕಾದ ಕೌಶಲ್ಯಗಳು ನವೀಕರಣಗೊಂಡಿವೆ ಎಂದರೆ ತಪ್ಪಾಗಲಾರದು.

ಉದ್ಯೋಗಿಗಳಲ್ಲಿ ಇರುವ ಕೌಶಲ್ಯವನ್ನು ಗುರುತಿಸಿ ಅವುಗಳನ್ನು ಬಳಸಿಕೊಂಡು ಸಂಸ್ಥೆಯನ್ನು ಅತ್ಯುನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವ ನಾಯಕರು ನಮಗೆ ಇವತ್ತು ಬೇಕಾಗಿದ್ದಾರೆ. ನಾಯಕನಾದವನು ಕೇವಲ ಭಾಷಣ–ಕ್ಕೆ ಸೀಮಿತವಾಗಬಾರದು, ಒಬ್ಬ ಅತ್ಯುತ್ತಮ ಆಲಿಸುವನಾಗಿರಬೇಕು ಮತ್ತು ಸಭೆಯಲ್ಲಿ ಎಲ್ಲರಿಗೂ ಮಾತನಾಡುವ ಅವಕಾಶ ನೀಡುವ ಗುಣ ಹೊಂದಿರಬೇಕು. ಒಬ್ಬ ಉದ್ಯೋಗಿ ತನ್ನ ಕಾರ್ಯವನ್ನು ಮಾಡುವಾಗ ಪದೇ ಪದೇ ವಿಫಲವಾಗುತ್ತಿದ್ದಾನೆ ಎಂದರೆ ಅದರ ಅರ್ಥ ಆತ ಬೆಳೆಯುತ್ತಿದ್ದಾನೆ ಎಂಬುದು, ಇಲ್ಲಿ ನಾವು ಗಮನಿಸಬೇಕಾದದ್ದು ಏನೆಂದರೆ ನಾಯಕತ್ವ ಪಡೆಯುವಲ್ಲಿ ಬೇಕಾಗುವ ಕೌಶಲ್ಯಗಳೆ ಬೇರೆ, ನಾಯಕತ್ವ ವಹಿಸಿಕೊಂಡ ನಂತರ ಇರಬೇಕಾದ ಕೌಶಲ್ಯಗಳೆ ಬೇರೆ.

ಇವತ್ತು ನಮಗೆ ಉದ್ಯೋಗಿಗಳನ್ನು ಅತ್ಯುತ್ತಮ ರೀತಿಯಲ್ಲಿ ವಿಚಾರ ಮಾಡುವಂತೆ ಪ್ರೇರೇಪಿಸುವಂತಹ ನಾಯಕರು ಬೇಕಾಗಿದ್ದಾರೆ. ಉದ್ಯೋಗಿಗಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸಿ ಅದನ್ನು ಅತ್ಯುನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವ ನಾಯಕರು ಬೇಕಾಗಿದ್ದಾರೆ. ನಿರ್ಧಾರ ಮಾಡಿ ವಿಚಾರ ಮಾಡುವಂತಹ ನಾಯಕ ನಮಗೆ ಬೇಕಾಗಿಲ್ಲ , ಬದಲಿಗೆ ವಿಚಾರ ಮಾಡಿ ನಿರ್ಧಾರ ಮಾಡುವ ನಾಯಕ ಬೇಕಾಗಿದ್ದಾನೆ. ಇತಿಹಾಸ ಬದಲಾಯಿಸಬಲ್ಲ ನಾಯಕ ಇವತ್ತು ನಮಗೆ ಬೇಕಾಗಿದ್ದಾನೆ. ಅತ್ಯುತ್ತಮ ಉದ್ಯೋಗಿಗಳು ಸಂಸ್ಥೆಯ ಆಸ್ತಿ ಅವರನ್ನು ಉಳಿಸಿಕೊಂಡು ಹೋಗುವ ಕಲೆ ಕೂಡ ನಾಯಕನಿಗೆ ಇರಬೇಕಾಗುತ್ತದೆ. ಇವತ್ತು ತಂತ್ರಜ್ಞಾನದ ಜ್ಞಾನ ಕೂಡ ಒಬ್ಬ ನಾಯಕನಿಗೆ ಇರಬೇಕಾದದ್ದು ಬಹಳ ಅವಶ್ಯಕ. ನಾಯಕತ್ವವು ಕ್ರಿಯಾತ್ಮಕ ಸ್ವಭಾವವನ್ನು ಹೊಂದಿದೆ, ನಾಯಕತ್ವವು ವಿಭಿನ್ನ ಕೌಶಲ್ಯಗಳ ಸಂಯೋಜನೆಯಾಗಿದೆ ಎಂದು ನಾವು ಮೊದಲು ಅರ್ಥ–ಮಾಡಿಕೊಳ್ಳಬೇಕು. ನಾಯಕತ್ವದ ಶೈಲಿ ಬಹಳಷ್ಟು ಬದಲಾಗಿದೆ ಈ ಹಿಂದೆ ಅನುಭವಿ ನಿವೃತ್ತ ವ್ಯಕ್ತಿ ಯಾವುದೇ ಸಂಸ್ಥೆಯನ್ನು ಮುನ್ನಡೆಸಲು ಉತ್ತಮ ಎಂದು ನಾವು ಪರಿಗಣಿಸುತ್ತಿದ್ದೆವು. ಅದು ತಪ್ಪಲ್ಲ, ಆದರೆ ಈಗ ಅದು ಬದಲಾಗಿದೆ. ಆದಷ್ಟು ನಾಯಕತ್ವವನ್ನು ಯುವಕರಿಗೆ ನೀಡಿದಷ್ಟು ಉತ್ತಮ ಏಕೆಂದರೆ ಅವರು ತಂತ್ರಜ್ಞಾನವನ್ನು ಬಲ್ಲವರಾಗಿರುತ್ತಾರೆ,ಏನಾದರೂ ಜೀವನದಲ್ಲಿ ಸಾಧನೆ ಮಾಡಬೇಕೆಂಬ ಹಂಬಲವನ್ನು ಹೊಂದಿರುತ್ತಾರೆ. ಇನ್ನೊಂದು ಗಮನಿಸಬೇಕಾದ ಅಂಶವೇನೆಂದರೆ ಒಂದು ಸಂಘ ಸಂಸ್ಥೆಯ ನಾಯಕತ್ವ ವಹಿಸಿಕೊಂಡವರಿಗೆ ಆ ಸಂಸ್ಥೆಯ ಬಗ್ಗೆ ಆಳವಾದ ಅಧ್ಯಯನ ಬಹಳ ಅವಶ್ಯಕ ಏಕೆಂದರೆ ಎಷ್ಟು ಆಳವಾಗಿ ಆ ಸಂಸ್ಥೆಯ ಬಗ್ಗೆ ಅವನು ಬಹಳ ತಿಳಿದುಕೊಂಡಿರುತ್ತಾನೋ ಅಷ್ಟೇ ಚೆನ್ನಾಗಿ ಆ ಸಂಘ ಸಂಸ್ಥೆಯ ನಾಯಕತ್ವವನ್ನು ಮುಂದುವ–ರಿಸಿಕೊಂಡು ಎತ್ತರಕ್ಕೆ ತೆಗೆದು ಕೊಂಡು ಹೋಗಬಲ್ಲ.ಕೆಳಗಿನ ಕೆಲವು ಪ್ರಶ್ನೆಗಳಿಗೆ ಉತ್ತರಿಸಿ.





1. ನಿಮ್ಮ ಉದ್ಯೋಗಿಗಳು ಕೆಲಸ ಮಾಡಲು ಕಷ್ಟ ಪಡುವುದನ್ನು ನೋಡಲು ನೀವು ಇಷ್ಟಪಡುವದಿಲ್ಲವೇ? ಮತ್ತು ಅವರು ಕಷ್ಟಪಡುವವರನ್ನು ಕಂಡು ನೀವೇ ಮುಂದಾಗಿ ಆ ಕೆಲಸವನ್ನು ಮಾಡಿ ಮುಗಿಸುತ್ತೀರಿ. ಈ ಪ್ರಶ್ನೆಗೆ ನೀವು ಉತ್ತರ ಹೌದು ಎಂದಾದರೆ ಇದು ಉತ್ತಮ ನಾಯಕನ ಲಕ್ಷಣವಲ್ಲ, ಏಕೆಂದರೆ ಒಬ್ಬ ಉದ್ಯೋಗಿ ತನಗೆ ವಹಿಸಿಕೊಟ್ಟ ಕೆಲಸವನ್ನು ಮುಗಿಸಲು ಹೆಣಗಾಡುತ್ತಿದ್ದಾನೆ ಎಂದರೆ ಅದರ ಅರ್ಥ ಬೆಳೆಯುತ್ತಿದ್ದಾನೆ ಎಂದು ಮತ್ತು ಅವರ ಕೆಲಸವನ್ನು ನೀವೇ ಮಾಡಿ ಮುಗಿಸುತಿದ್ದೀರಿ ಅಂ–ದರೆ ಅವರಿಗೆ ಕಲಿಯಲು ನೀವು ಸಂಪೂರ್ಣ ಸಹಕಾರ ನೀಡುತ್ತಿಲ್ಲ ಎಂಬುದೇ ಅದರ ಅರ್ಥ.

2. ಒಬ್ಬ ನಾಯಕ ಸಭೆಗೆ ಆಗಮಿಸಿದಾಗ ಅಲ್ಲಿ ಚರ್ಚೆ ಆಗಬೇಕೆ ಹೊರತು ವಾದಗಳಿಗೆ ಮತ್ತು ಜಗಳಗಳಿಗೆ ಅವಕಾಶ ಇರಬಾರದು. ಏಕೆಂದರೆ ವಾದಗಳಿಗೆ ಮತ್ತು ಜಗಳಗಳಿಗೆ ಅವಕಾಶ ಮಾಡಿಕೊಟ್ಟಂತ ನಾಯಕ ಆ ಸಂಸ್ಥೆಯನ್ನು ಎಂದೂ ಯಶಸ್ವಿಯಾಗಿ ಮುನ್ನಡೆಸಲಾರ. ಹೌದು ಒಂದು ಸಭೆಯಲ್ಲಿ ಯಶಸ್ವಿಯಾಗಿ ನಿರ್ವಹಿಸಲಾರದ ನಾಯಕ, ಅದೇಗೆ ತಾನೇ ಒಂದು ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಾನೆ. ಇಂತಹ ನಾಯಕ ದಯವಿಟ್ಟು ಮನೆಯಲ್ಲಿ ಕೂತುಕೊಳ್ಳುವುದು ಒಳಿತು.

3. ನೀವು ಮಾಹಿತಿಯ ಮೇಲೆ ನಿರ್ಧಾರ ತೆಗೆದುಕೊಳ್ಳುತ್ತೀರಾ? ನಾಯಕನಾದವನು ಕೇವಲ ಮಾಹಿತಿ(ಖಟಜಿಂಡಿಟಚಿಣುಂಟ) ಮೇಲೆ ಮಾತ್ರ ಗಮನಹ–ರಿಸಬಾರದು, ಅದರಲ್ಲಿ ಬರುವ ಅಂಕೆ ಸಂಖ್ಯೆಗಳ(ಆಚಿಣಚಿ) ಮೇಲೆ ಅವನು ನಮನ ಹರಿಸಬೇಕು. ಏಕೆಂದರೆ ನಮಗೆಲ್ಲ ತಿಳಿದಿರುವ ಹಾಗೆ Picture speeks more then words ಹೇಗೋ ಅದೇ ರೀತಿ Data speeks more then information. ಏಕೆಂದರೆ ಅಂಕೆ ಸಂಖ್ಯೆಗಳು ಗುಣಮಟ್ಟದ ನಿರ್ಧಾರ ತೆಗೆದುಕೊಳ್ಳಲು ಮತ್ತು ಕಾರ್ಯತಂತ್ರ ರೂಪಿಸಲು ಬಹಳ ಸಹಕಾರಿಯಾಗಿದೆ.

ಒಟ್ಟಿನಲ್ಲಿ ಇದರ ಜೊತೆಗೆ ಒಬ್ಬ ನಾಯಕನಿಗೆ ಉತ್ತಮ ಸಂಸ್ಕಾರ,ಅತ್ಯುತ್ತಮ ಮೌಲ್ಯಗಳು,ತಾಳ್ಮೆ, ದೂರ ದೃಷ್ಟಿ ಇರಲೇಬೇಕು, ನಾಯಕತ್ವ ಇದೊಂದು ಪ್ರಯಾಣ ಹೌದು,ನಾಯಕತ್ವವು ಉಡುಗೊರೆಯಾಗಿದೆ.

# ಪಾರದರ್ಶಕ ಪರೀಕ್ಷೆಗಾಗಿ ಕಟ್ಟುನಿಟ್ಟಿನ ಕ್ರಮ :ಡಿಸಿ ಟಿ.ಭೂಬಾಲನ್



**ಉದಯರಶ್ಮಿ ನ್ಯೂಸ್**

ವಿಜಯಪುರ: ಎಸ್ ಎಸ್ ಎಲ್ ಸಿ 2 ಪರೀಕ್ಷೆಯನ್ನು ಪಾರದರ್ಶಕ ಹಾಗೂ ನಕಲು ಮುಕ್ತವಾಗಿ ನಡೆಸಲು ಕಟ್ಟು ನಿಟ್ಟಿನ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಸೂಚಿಸಿದರು.

ಶುಕ್ರವಾರ ನಗರದ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯ:2ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೂನ್ 14 ರಿಂದ 22ರ ವರೆಗೆ ಜಿಲ್ಲೆಯಲ್ಲಿ ಒಟ್ಟು 26 ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಲಿದ್ದು, ಸುಮಾರು 8,060 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ. ಪರೀಕ್ಷೆಯಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಕುಡಿಯುವ ಶುದ್ಧ ನೀರು, ಬೆಂಚ್, ಮಧ್ಯಾಹ್ನ ಬಿಸಿಯೂಟ, ಸಾರಿಗೆ ವ್ಯವಸ್ಥೆ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಂತೆ ಸೂಚಿಸಿದರು.

ಪರೀಕ್ಷಾ ದಿನಗಳಂದು ಆಯಾ ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸಿರುವ ತಹಶೀಲ್ದಾರರು, ತಾಲೂಕು ಪಂಚಾಯತ ಕಾರ್ಯನಿರ್ವಹಣಾಧಿಕಾರಿಗಳು, ನರೇಗಾ ಯೋಜನೆಯ ಸಹಾಯಕ ನಿರ್ದೇಶಕರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮಗೆ ವಹಿಸಿಕೊಟ್ಟ ವಿಶೇಷ ವಿಚಕ್ಷಣಾ ದಳದ ಕರ್ತವ್ಯಗಳನ್ನು ತಪ್ಪದೆ ನಿರ್ವಹಿಸಬೇಕು ತಪ್ಪಿದಲ್ಲಿ ಪರೀಕ್ಷಾ ಮಂಡಳಿಯ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸುವುದರೊಂದಿಗೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಅವರು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗ ರಿಷಿ ಆನಂದ ಮಾತನಾಡಿ, ಪರೀಕ್ಷಾ ದಿನಗಳಂದು ಹೆಸ್ಕಾಂ ಇಲಾಖೆಯು ಸಮರ್ಪಕವಾಗಿ ವಿದ್ಯುತ್ ಪೂರೈಸುವುದರೊಂದಿಗೆ ವಿದ್ಯುತ್ ವ್ಯತ್ಯಯವಾಗದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪರೀಕ್ಷಾ ಕೊಠಡಿ ಮುಖ್ಯ ಅಧೀಕ್ಷಕರು, ಪ್ರಶ್ನೆ ಪತ್ರಿಕೆ ಪಾಲಕರು, ಸ್ಥಾನಿಕ ಜಾಗೃತ ದಳ ಹಾಗೂ ಮೊಬೈಲ್ ಸ್ವಾದೀನ ದಳಗಳ ಅಧಿಕಾರಿಗಳು ತಮಗೆ ವಹಿಸಿದ ಕರ್ತವ್ಯಗಳನ್ನು ಕಟ್ಟು ನಿಟ್ಟಿನ ಪಾಲಿಸಬೇಕು. ಪರೀಕ್ಷಾ ಕೊಠಡಿಗಳಲ್ಲಿ ಸಿ.ಸಿ ಕ್ಯಾಮಾರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಕುರಿತು ನಿಗಾ ವಹಿಸಬೇಕು, ನಿರಂತರ ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಅದಕ್ಕೆ ಅನುಗುಣವಾಗಿ ವಿದ್ಯುತ್ ತೊಂದರೆಯಾಗದ ರೀತಿ ಜನರೇಟ–ರ್ ಇಲ್ಲವೆ ಯು.ಪಿ.ಎಸ್ ವ್ಯವಸ್ಥೆ ಮಾಡಿಕೊಳ್ಳಬೇಕು. ಪರೀಕ್ಷೆ ಕೊಠಡಿಯ ಹೊರಗಡೆಯ 200ಮೀ ಅಳತೆಯಲ್ಲಿ ನಿಷೇಧಾಜ್ಞೆ ಜಾರಿಇದ್ದು, ಅದಕ್ಕೆ ಅವಶ್ಯಕವಾದ ಪೋಲಿಸ್ ಸಿಬ್ಬಂದಿಗಳನ್ನು ನಿಯೋಜಿಸಲು ಪೋಲಿಸ್ ಅಧಿಕಾರಿಗಳು ಸಹಕಾರ ಕೋರುವಂತೆ ಅವರು ಸೂಚಿಸಿದರು.

ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ಉಮಾದೇವಿ ಸೊನ್ನದ, ಪೋಲಿಸ್ ಅಧಿಕಾರಿ ಪರಮೇಶ್ವರ ಕವಟಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಹೆಸ್ಕಾಂ ಅಧಿಕಾರಿಗಳು ತಾಲೂಕು ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬಿ.ಇ.ಓ ಗಳು, ಬಿ.ಆರ್.ಸಿ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಹಿಳಾ ವಿಶ್ವವಿದ್ಯಾಲಯದಿಂದ ಕಲಕೇರಿಯಲ್ಲಿ ಪರಿಸರ ದಿನಾಚರಣೆ

# ಪರಿಸರ ರಕ್ಷಣೆ ದಿನನಿತ್ಯದ ಕಾಯಕವಾಗಲಿ :ಪ್ರೊ.ಜ್ಯೋತಿ



**ಉದಯರಶ್ಮಿ ನ್ಯೂಸ್**

ಕಲಕೇರಿ: ವಿದ್ಯಾರ್ಥಿಗಳು ಕೇವಲ ವನಮಹೋತ್ಸವದ ಸಂದರ್ಭದಲ್ಲಿ ಸಸಿ ನೆಡುವುದು ಅಷ್ಟೇ ಅಲ್ಲ, ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯವನ್ನು ವಿದ್ಯಾರ್ಥಿಗಳು ಪ್ರತಿನಿತ್ಯ ತಪ್ಪದೇ ಮಾಡಬೇಕಾಗಿದೆ ಎಂದು ವಿಜಯಪುರದ ಕ.ರಾ.ಅ.ಮ.ವಿ.ವಿಯ ದೈಹಿಕ ಶಿಕ್ಷಣ ವಿಭಾಗದ ಪ್ರೋ. ಜ್ಯೋತಿ ಉಪಾಧ್ಯೆ ಹೇಳಿದರು.

ಕಲಕೇರಿಯ ಶ್ರೀ ಬಸವೇಶ್ವರ ಮಹಿಳಾ ಮಹಾವಿದ್ಯಾಲಯಕ್ಕೆ ಶುಕ್ರವಾರ ಭೇಟಿ ನೀಡಿದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ "ಸ್ಥಾನಿಕ ವಿಚಾರಣಾ ಸಮಿತಿಯ ಪರಿಶೀಲನಾ ನಿಮಿತ್ಯವಾಗಿ ಆಗಮಿಸಿದ ಸಂದರ್ಭದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾಲೇಜಿನ ಆವರಣದಲ್ಲಿ ಸಸಿ ನೆಟ್ಟು ನೀರುಣಿಸಿ ಅವರು ಮಾತನಾಡಿದರು.

ಶ್ರೀ ಬಸವೇಶ್ವರ ಮಹಿಳಾ ಕಾಲೇಜಿನ ಅಭಿವೃದ್ಧಿ ಪರಿಶೀಲನಾ ತಂಡದ ಸದಸ್ಯರಾಗಿ ಆಗಮಿಸಿ ಮಾತನಾಡಿದ ಅವರು ನಾವೆಲ್ಲರೂ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ರಕ್ಷಣೆಗೆ ಎಷ್ಟು ಮಹತ್ವ ನೀಡುತ್ತೇವೆಯೋ ಹಾಗೆಯೇ ಸಸ್ಯ ಸಂಪತ್ತು ಮತ್ತು ಮಣ್ಣಿನ ಸಂರಕ್ಷಣೆ ಮಾಡಿ ಪರಿಸರದ ರಕ್ಷಣೆ ಮಾಡಿದಾಗ ಮಾತ್ರ ನಾವು ಸುಂದರ ಪರಿಸರದಲ್ಲಿ ಆರೋಗ್ಯಯುತ ಜೀವನ ನಡೆಸಲು ಸಾಧ್ಯವಾಗುತ್ತದೆ ಆದ್ದರಿಂದ ಮಳೆ ಬೆಳೆ ಚೆನ್ನಾಗಿ ಬರಲು ಮತ್ತು ಪರಿಸರದ ಸಮತೋಲನ ಕಾಪಾಡಲು ಪರಿಸರ ರಕ್ಷಣೆ ನಮ್ಮ ದಿನನಿತ್ಯದ ಕಾಯಕವಾಗಿಸಿಕೊಳ್ಳೋಣ ಎಂದರು.

ಈ ವೇಳೆ ಸಮಿತಿಯ ಚೇರಮನ್ ಪ್ರೋ.ಬಸವರಾಜ ಲಕ್ಕಣ್ಣನವರ, ಪ್ರೋ.ಲಕ್ಷ್ಮಿದೇವಿ. ವಾಂಯ್, ಸಂಸ್ಥೆಯ ಅಧ್ಯಕ್ಷ ಎಸ್.ಬಿ.ಪಾಟೀಲ, ಕಾರ್ಯದರ್ಶಿಗಳಾದ ಎಮ್.ಎಸ್.ಜೋಗೂರ, ಎಸ್.ಜಿ.ಝುಳಕಿ, ಎಸ್.ಸಿ.ಚಳ್ಳಗಿ ಪ್ರಾಚಾರ್ಯರಾದ ಜೆ.ಎಸ್.ಕಾದಳ್ಳಿ ಪ್ರೋ॥ ಎಮ್.ಎ.ಪಾಟೀಲ, ಪ್ರೋ॥ ಎಸ್.ಎಸ್.ದುರ್ಗಿ, ಆರ್.ವ್ಹಿ.ಕುಲಕರ್ಣಿ ಸೇರಿದಂತೆ ಕಾಲೇಜಿನ ಸಿಬ್ಬಂದಿವರ್ಗ ಇದ್ದರು.

# ಸಸಿ ನೆಡುವುದರ ಮೂಲಕ ಪರಿಸರ ಕಾಪಾಡಿಕೊಳ್ಳಬೇಕು



**ಉದಯರಶ್ಮಿ ನ್ಯೂಸ್**

ಸಿಂದಗಿ: ಪ್ರತಿಯೊಬ್ಬರೂ ನಿಮ್ಮ ನಿಮ್ಮ ಮನೆಯ ಮುಂದೆ, ಸಾರ್ವಜನಿಕ ಸ್ಥಳ, ಜಮೀನಿನಲ್ಲಿ ಸಸಿ ನಡುವುದರ ಮೂಲಕ ಪರಿಸರವನ್ನು ಕಾಪಾಡಿಕೊಳ್ಳಬೇಕು ಎಂದು ನರೇಗಾ ಸಹಾಯಕ ನಿರ್ದೇಶಕ ನಿತ್ಯಾನಂದ ಯಲಗೋಡ ಹೇಳಿದರು.

ತಾಲೂಕಿನ ರಾಂಪೂರ ಪಿಎ ಗ್ರಾಮದ ವ್ಯಾಪ್ತಿಯ ನರೇಗಾ ಅಡಿಯಲ್ಲಿ ನಿರ್ಮಾಣವಾದ ಅಮೃತ ಸರೋವರ ದಡದಲ್ಲಿ ಹಮ್ಮಿಕೊಂಡ ಸಸಿ ನಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿವರ್ಷದಂತೆ ಈ ವರ್ಷವೂ ವಿಶ್ವ ಪರಿಸರ ದಿನವನ್ನು ಆಚರಣೆ ಮಾಡಲಾಗುತ್ತಿದೆ. ಈ ಅಮೃತ ಸರೋವರದಲ್ಲಿ 100ಕ್ಕೂ ಅಧಿಕ ಸಸಿಗಳನ್ನು ನಡುತ್ತಿದ್ದೇವೆ ಎಂದರು.

ಇದೇ ಸಂದರ್ಭದಲ್ಲಿ ದಸ್ತಗೀರಸಾಬ್ ನದಾಫ್, ಐಇಸಿ ಸಂಯೋಜಕರು ಭೀಮರಾಯ ಚೌಧರಿ, ಕಾರ್ಯದರ್ಶಿ ಬಸವರಾಜ್ ಪಟ್ಟಣಶೆಟ್ಟಿ, ಸಂಪತ್, ನಾಗು ವಾಲೀಕಾರ ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಮತ್ತು ಸಿಬ್ಬಂದಿಗಳು ನರೇಗಾ ಕೂಲಿಕಾರರು ಇದ್ದರು.4

# ಮುದ್ದೇಬಿಹಾಳ: ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ಥ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ಸೇರಿದಂತೆ ತಾಲೂಕಿನ ಹಲವೆಡೆ ಗುರುವಾರ ರಾತ್ರಿ ಗುಡುಗು, ಸಿಡಿಲು ಸಮೇತ ಸುರಿದ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ಥವಾಗಿದೆ.

ತಾಲೂಕಿನ ತಾರನಾಳ ಗ್ರಾಮದ ಮಡಿವಾಳಮ್ಮ ಚಲವಾದಿ, ಹಣಮಂತ ಹಂದ್ರಾಳ ದೇವೂರ ಗ್ರಾಮದ ದುರ್ಗವ್ವ ಮಾದರ, ಶಂಕ್ರವ್ವ ಮಾದರ, ಕುಂಟೋಜಿ ಗ್ರಾಮದ ಮರಲಿಂಗವ್ವ ಕವಡಿಮಟ್ಟಿ ಮತ್ತು ಶರಣಮ್ಮ ಗೊಲ್ಲರ ಇವರ ಮನೆಗಳು ಭಾಗಶಃ ಹಾನಿಯಾದರೆ, ಕುಂಟೋಜಿ ಗ್ರಾಮದ ಯಲ್ಲಪ್ಪ ಯರಝುರಿಯವರಿಗೆ ಸೇರಿದ್ದ ಆಕಳು ಸಿಡಿಲು ಬಡೆದು ಸಾವನ್ನಪ್ಪಿದೆ.

ನಿಯಮಗಳಂತೆ ಆಕಳು ಮೃತ ಪಟ್ಟರೆ ರೂ. 37500, ಪಕ್ಕಾ ಮನೆ ಸಂಪೂರ್ಣ ಹಾನಿಯಾದರೆ ರೂ. 120000, ಪಕ್ಕಾ ಮನೆ ಶೇ.15 ರಷ್ಟು ಹಾನಿಯಾದರೆ ರೂ.6500 ಗಳನ್ನು ಪರಿಹಾರವಾಗಿ ನೀಡಲಾಗುವದು ಎಂದು ತಹಶೀಲ್ದಾರ ಬಸವರಾಜ ನಾಗರಾಳ ತಿಳಿಸಿದ್ದಾರೆ.

# ಸಿಡಿಲು ಬಡಿದು ಎಮ್ಮೆ ಸಾವು

**ಉದಯರಶ್ಮಿ ನ್ಯೂಸ್**



ಚಡಚಣ: ಪಟ್ಟಣದ ನಿವರಗಿ ರಸ್ತೆಯ ಸಮೀಪದಲ್ಲಿ ರಾಮ ಬಡಿಗೇರ ಅವರಿಗೆ ಸೇರಿದ ಎಮ್ಮೆ ಸಿಡಿಲಿಗೆ ಸಾವನಪ್ಪಿದ ಘಟನೆ ಶುಕ್ರವಾರ ಸಂಜೆ ನಡೆದಿದೆ.ಘಟನೆಯಲ್ಲಿ ಯಾವುದೇ ಜನರಿಗೆ ಪ್ರಾಣ ಹಾನಿಯಾಗಿಲ್ಲ ಎಂದು ತಿಳಿದು ಬಂದಿದೆ.

# ಕಾಲುವೆ ಕಾಮಗಾರಿಗೆ ಆಗ್ರಹಿಸಿ ಜೂ.8 ರಿಂದ ಉಪವಾಸ ಸತ್ಯಾಗ್ರಹ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಚಿಮ್ಮಲಗಿ ಏತ ನೀರಾವರಿ ಹಾಗೂ ನಾಗರಬೆಟ್ಟ ಏತ ನೀರಾವರಿ ಯೋಜನೆಯಡಿ ಭೂಮಿ ಕಳೆದುಕೊಂಡ ರೈತರಿಗೆ ಅವಾರ್ಡ ಪ್ರತಿ ನೀಡಿ, ಅಪೂರ್ಣಗೊಂಡಿರುವ ಕಾಲುವೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆಗ್ರಹಿಸಿ ತಾಲೂಕಿನ ನಾಲತವಾಡ ಬಳಿಯ ಅಮರೇಶ್ವರ ದೇವಸ್ಥಾನದ ಆವರಣದಲ್ಲಿ ಜೂ8 ರಿಂದ ಆಮರಣ ಉಪವಾಸ ಸತ್ಯಾಗ್ರಹ ಪ್ರಾರಂಭಿಸುವುದಾಗಿ ಹೋರಾಟಗಾರ, ಕಾಂಗ್ರೆಸ್ ಮುಖಂಡ ಶಿವಾನಂದ ವಾಲಿ ಹೇಳಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಬಗ್ಗೆ ಕಳೆದ ಕೆಲವು ದಿನಗಳ ಹಿಂದೆ ಸಂಬಂಧಿಸಿದ ಅಧಿಕಾ–ರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದೆ. ನಮ್ಮ ಬೇಡಿಕೆ ಈಡೇರಿಸದಿದ್ದರೆ ಆಮರಣ ಉಪವಾಸ ಸತ್ಯಾಗ್ರಹ ಪ್ರಾರಂಭಿಸುವದಾಗಿ ಎಚ್ಚ–ರಿಕೆ ಕೂಡ ನೀಡಿದ್ದೆ. ನಮ್ಮ ಮನವಿಗೆ ಇದುವರೆಗೆ ಯಾವುದೇ ರೀತಿಯಿಂದ ಸ್ಪಂದಿಸದ ಕಾರಣ ಸತ್ಯಾಗ್ರಹ ಪ್ರಾರಂಭಿಸುತ್ತಿದ್ದೇನೆ. ಸತ್ಯಾಗ್ರಹಕ್ಕೆ ವಿವಿಧ ಸಂಘಟನೆಗಳು, ರೈತರು, ಹೋರಾಟಗಾರರು ಬೆಂಬಲಿಸುವದಾಗಿ ತಿಳಿಸಿದ್ದಾರೆ ಎಂದರು.

# ಗ್ರಾಮೀಣ ಜನರಿಗೆ ವರದಾನವಾದ ಅಮೃತ ಸರೋವರಗಳು :ಸಾಲಿ



ಉದಯರಶ್ಮಿ ನ್ಯೂಸ್

ತಿಕೋಟಾ: 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆದೇಶದಂತೆ ನಮ್ಮ ತಾಲೂಕಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮ ಪಂಚಾಯತಿಗಳ ಮೂಲಕ ಒಟ್ಟು 07 ಅಮೃತ ಸರೋವರಗಳನ್ನು ನಿರ್ಮಾಣ ಮಾಡಲಾಗಿದೆ. ಪ್ರಸ್ತುತ ತಾಲೂಕಿನ ಸಿದ್ಧಾಪುರ (ಕೆ) ಗ್ರಾಮ ಪಂಚಾಯತಿ ವ್ಯಾಪ್ತಿಯ ಧನ್ನರ್ಗಿ ಗ್ರಾಮದಲ್ಲಿ ನಿರ್ಮಿಸಿದ ಅಮೃತ ಸರೋವರದಲ್ಲಿ ಜೂ.6ರಂದು ಸುರಿದ ಭಾರಿ ಮಳೆಯಿಂದಾಗಿ ಅಮೃತ ಸರೋವರ ಮಳೆನೀ–ರಿನಿಂದ ತುಂಬಿ, ಸುಂದರವಾಗಿ ಕಂಗೊಳಿಸುತ್ತಿದೆ. ಇದರಿಂದ ಈ ಭಾಗದ ಸಾವಿರಾರು ರೈತ್ತರಿಗೆ ಅನುಕೂಲವಾಗಲಿದ್ದು, ಗ್ರಾಪಂ ಸದಸ್ಯರು & ರೈತ್ತರು ಹರ್ಷ ವ್ಯಕ್ತ ಪಡಿಸುತ್ತಿದ್ದಾರೆ ಎಂದು ತಿಕೋಟಾ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಪ್ರವೀಣಕುಮಾರ ಸಾಲಿ ಹೇಳಿದರು.

ಧನ್ನರ್ಗಿ ಗ್ರಾಮದಲ್ಲಿರುವ ಅಮೃತ ಸರೋವರ ಕೆರೆಗೆ ಇಂದು ತಿಕೋಟಾ ತಾಲೂಕು ಪಂಚಾಯತಿಯ ತಾಂತ್ರಿಕ ಸಂಯೋಜಕ ಸಂಜೀವಕುಮಾರ ಬಿರಾದಾರ ಮತ್ತು ತಾಲೂಕು ಐಇಸಿ ಸಂಯೋಜಕ ಕಲ್ಲಪ್ಪ ನಂದರಗಿ ಭೇಟಿ ನೀಡಿ ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಸದಸ್ಯರು & ಸಿಬ್ಬಂದಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯ ಸುರೇಶ ಅವಟಿ ಅವರು ಮಾತನಾಡಿ "ಈ ಅಮೃತ ಸರೋವರ ನಿರ್ಮಾಣದಲ್ಲಿ ನಮಗೆ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳು ತುಂಬಾ ಸಹಾಯ ಸಹಕಾರ ನೀಡಿದ್ದಾರೆ. ಕಾಲಕಾಲಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡುವವದರ ಜೊತೆಗೆ ಸೂಕ್ತ ಸೂಚನೆಗಳನ್ನು ನೀಡಿದ ಫಲವಾಗಿ ಇಂದು ನಮ್ಮ ಊರಿನಲ್ಲಿ ಸುಂದರವಾದ ಅಮೃತ ಸರೋವರ ನಿರ್ಮಾಣವಾಗಿದೆ. ಈ ಅಮೃತ ಸರೋವರದಲ್ಲಿ ಈಗಾಗಲೇ ರಾಷ್ಟ್ರೀಯ ಹಬ್ಬಗಳಂದು ಧ್ವಜಾರೋಹಣ ನೇರವೇರಿಸಲಾಗಿದೆ ಹಾಗೂ ಸೈನಿಕರ ನೆನಪಿಗಾಗಿ ಒಂದು ಫಲಕವನ್ನು ಸಹ ಅಳವಡಿಸಲಾಗಿದ್ದು, ಜನರಲ್ಲಿ ದೇಶ ಪ್ರೇಮ ಬೆಳೆಸಲು ಈ ಸರೋವರ ಸಹಾಯಕವಾಗಿದೆ ಎಂದರು.

ನಂತರ ಗ್ರಾಮದ ಮುಖಂಡ ಮಚ್ಚೇಂದ್ರ ಹೊಸಮನಿ ಮಾತನಾಡಿ, "ಈ ಸರೋವರ ತುಂಬಿರುವದರಿಂಥ ನಮಗೆಲ್ಲಾ ತುಂಬಾ ಆನಂದವಾಗಿದೆ. ಈ ಸರೋವರ ನಿರ್ಮಿಸಲು ಶ್ರಮಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಪ್ರಸ್ತುತ ಮಳೆಯಿಂದ ಈ ಸರೋವರ ಸಂಪೂರ್ಣ ಭರ್ತಿಯಾಗಿದ್ದು, ಮುಂದಿನ ಸಾಕಷ್ಟು ದಿನಗಳವರೆಗೆ ಈ ನೀರು ನೀಲ್ಲುವದರಿಂದ ನಮಗೆ ಬಹು ಕಾಲ ನೀರಿನ ಸಮಸ್ಯೆ ಇಲ್ಲದಂಗಾಗುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.


ತಾಂತ್ರಿಕ ಸಂಯೋಜಕ ಸಂಜೀವಕುಮಾರ ಬಿರಾದಾರ ಮಾತನಾಡಿ "ತಾಲೂಕಿನ ಧನ್ನರ್ಗಿ ಗ್ರಾಮದಲ್ಲಿ ಸರೋವರವನು ನಿರ್ಮಿಸಿದ್ದು, ಪ್ರಸ್ತುತ ಅದು ರೈತ್ತ–ರಿಗೆ ಅನುಕೂಲವಾಗುತ್ತಿದೆ. ಇದು ನಮ್ಮ ಇಲಾಖೆಯ ಶ್ರಮಕ್ಕೆ ಸಿಕ್ಕ ಫಲ ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ಬಾಲಕೃಷ್ಣ ಕದಂ, ಸುರೇಶ ಅವಟಿ, ತಾಲೂಕು ಪಂಚಾಯತಿಯ ತಾಂತ್ರಿಕ ಸಂಯೋಜಕ ಸಂಜೀವಕುಮಾರ ಬಿರಾದಾರ, ತಾಲೂಕು ಐಇಸಿ ಸಂಯೋಜಕ ಕಲ್ಲಪ್ಪ ನಂದರಗಿ, ಗ್ರಾಮದ ಮುಖಂಡರಾದ ಬಾಲಕೃಷ್ಣ ಕದಂ, ಗ್ರಾಪಂ ಸಿಬ್ಬಂದಿ ಸುರೇಶ ಸಪ್ತಾಳಕರ ಸೇರಿದಂತೆ ಇತರರು ಹಾಜರಿದ್ದರು.

"ಮಹಾತ್ಮ ಗಾಂದಿ ನರೇಗಾ ಯೋಜನೆಯನ್ನು ನಮ್ಮ ತಿಕೋಟಾ ತಾಲೂಕಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ. ಗ್ರಾಮ ಪಂಚಾಯತಿ ಅಧಿಕಾರಿಗಳು ಗಾಗೂ ಚುನಾಯಿತ ಪ್ರತಿನಿಧಿಗಳ ನಡುವೆ ಸಹಕಾರ ಮನೋಭಾವದಿಂದ ಕೆಲಸ ಮಾಡುತ್ತಿರುವದೇ ನಮ್ಮ ತಾಲೂಕಿನ ಪ್ರಗತಿಗೆ ಕಾರಣವಾಗಿದೆ. ಇದರ ಜೊತೆಗೆ ಮಹಿಳೆಯರಿಗೆ & ವಿಶೇಷಚೇತನರಿಗೆ ನರೇಗಾ ಯೋಜನೆಯಡಿ ಹೆಚ್ಚಿಗೆ ಉದ್ಯೋಗ ನೀಡಲು ಶ್ರಮಿಸಲಾಗುತ್ತಿದೆ.

– ಕಲ್ಲಪ್ಪ ನಂದರಗಿ, ತಾಲೂಕು ಐಇಸಿ ಸಂಯೋಜಕರು, ತಾಲೂಕು ಪಂಚಾಯತಿ, ತಿಕೋಟಾ


## ಜನುಮದಿನದ ಶುಭಾಶಯಗಳು ರಾಜ್ಯಾಧ್ಯಕ್ಷರಿಗೆ




ಹೃತ್ಪೂರ್ವಕ ಶುಭ ಕೋರುವವರು



ಸಂಗಮೇಶ ಪಾಟೀಲ
ಜಿಲ್ಲಾಧ್ಯಕ್ಷರು
ವಿಷ್ಣು ಸೇನಾ ಸಮಿತಿ
ವಿಜಯಪುರ ಜಿಲ್ಲಾ ಘಟಕ
ಮೋ: 93534 22397


# ಮೋರಟಗಿಯ ಅಮೋಘಸಿದ್ದೇಶ್ವರ ಜಾತ್ರೆ ಃ ಭಂಡಾರದಲ್ಲಿ ಮಿಂದೆದ್ದ ಭಕ್ತ ಸಾಗರ

## ಸಿದ್ಧಿಪುರುಷ ಕನ್ನಯ್ಯ ಅಜ್ಜನ ಭರಪೂರ ಮಳೆ ಹೇಳಿಕೆ ; ರೈತರ ಕೇಕೆ!

ಉದಯರಶ್ಮಿ ನ್ಯೂಸ್

ಮೋರಟಗಿ: "ರೋಣಿ ಮಿರಗಕ್ಕ ಕೂರಿಗಿ ಸಾಗ, ಪುಷ್ಯ– ಪುನರ್ವಸು ದೇಶಕ್ಕೆ ಸಂಪೂರ್ಣ, ನಂಬಿದ ರೈತಗ ಹಿಂಬಾಳಾಗಿರತೀನಿ.."

ಮಿರಗ ಕೂಡುವ ದಿನವೇ ಗ್ರಾಮದಲ್ಲಿ ಕೇಳಿಬಂದ ಇಂಥ–'ದೊಂದು ಹೇಳಿಕೆ ಸುತ್ತಲಿನ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. 'ಮುತ್ಯಾನ ಮಾತಿನಂತೆ ಮಳೆರಾಯ ಕೈಹಿಡದರ ಬಾಳ ಹಸನಾದಂಗ' ಎಂದು ಅನ್ನದಾತರು ಆತ್ಮವಿಶ್ವಾಸದಿಂದ ಕೃಷಿ ಚಟುವಟಿಕೆಗೆ ಮುಂದಾಗಿದ್ದಾರೆ.



ಗ್ರಾಮದ ಆರಾಧ್ಯ ದೈವ, ಭಕ್ತಿ ಭಂಡಾರದ ಅವತಾರಿ, ಸಿದ್ಧಿಪುರುಷ ಅಮೋಘಸಿದ್ಧೇಶ್ವರ ಜಾತ್ರೆ ನಿಮಿತ್ತ ಶುಕ್ರವಾರ ನಡೆದ ಹೇಳಿಕೆಯಲ್ಲಿ ಪಟ್ಟದ ದೇವರಾದ ಕನ್ನಯ್ಯ ಮುತ್ಯಾ ಅವರು ಮಳೆ ಭವಿಷ್ಯ ನುಡಿದಿದ್ದಾರೆ. ಅಜ್ಜನ ವಾಣಿಯಂತೆ ಈ ಬಾರಿ ಉತ್ತಮ ಮಳೆಯಾಗಲಿದೆ ಎಂದು ಗ್ರಾಮಸ್ಥರು ಸಂತಸಗೊಂಡಿದ್ದಾರೆ.

ಹೇಳಿಕೆ ಸಂದರ್ಭದಲ್ಲಿ ಸುತ್ತಲಿನ ಗ್ರಾಮಗಳ ನೂರಾರು ಜನ ನೆರೆದಿದ್ದರು.

ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಕೂಡಾ ಸಂಪ್ರದಾಯದಂತೆ ಅದ್ದೂರಿಯಾಗಿ ನಡೆದ ಜಾತ್ರೆಯಲ್ಲಿ ಸಾವಿರಾರು ಭಕ್ತರು ಭಂಡಾರದಲ್ಲಿ ಮಿಂದ್ದೆದ್ದರು.

ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಭಕ್ತರು ದೇವರ ದರ್ಶನ ಪಡೆದರು.

ಗುರುವಾರ ರಾತ್ರಿ 8 ಗಂಟೆಗೆ ಗಂಗಸ್ನಾನ ಮುಗಿಸಿದ ನಂತರ ಗರ್ಭ ಗುಡಿಯಲ್ಲಿ ಹೂವಿನ ಹೇಳಿಕೆ ಜರುಗಿತು. ಶುಕ್ರವಾರ ಬೆಳಿಗ್ಗೆ ಸಕಲ ವಾದ್ಯ ವೈಭವದೊಂದಿಗೆ ಅಮೋಘಸಿದ್ದೇಶ್ವರ ಪಲ್ಲಕ್ಕಿ ಮೆರವಣಿಗೆ ಆರಂಭವಾಯಿತು. ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಪಲ್ಲಕ್ಕಿ ಭಕ್ತರ ಮನೆಗಳನ್ನು ಪ್ರವೇಶಿಸುತ್ತಿದ್ದಂತೆ ಸಂಭ್ರಮ ಮುಗಿಲುಮುಟ್ಟಿತು. ವಿವಿಧ ಜಿಲ್ಲೆಗಳಿಂದ ಬಂದಿದ್ದ ಡೊಳ್ಳು ಕುಣಿತ ಸಂಘಗಳು ಆಕರ್ಷಕ ಕುಣಿತದ ಮೂಲಕ ಜನಮನ ಸೆಳೆದವು. ಚಿತ್ರ ವಿಚಿತ್ರ ಮದ್ದು ಸುಡುವ ಕಾರ್ಯಕ್ರಮ ಕಣ್ಮನ ಸೆಳೆಯಿತು. ನೂರಾರು ಭಕ್ತರು ಹರಕೆ ತೀರಿಸಿದರು.

"ಮೋರಟಗಿ ಗ್ರಾಮದ ಅಮೋಘಸಿದ್ದೇಶ್ವರ ನಂಬಿದ ಭಕ್ತರ ಇಷ್ಟಾರ್ಥ ಕರುಣಿಸುವ ದೈವ. ಸಾವಿರಾರು ರೈತರು ಇಲ್ಲಿ ನಡೆಯುವ ಜಾತ್ರೆಗೆ ಬಂದು ದೇವರ ದರ್ಶನ ಪಡೆದು ಕೃಷಿ ಚಟುವಟಿಕೆ ಆರಂಭಿಸುವುದು ವಾಡಿಕೆಯಾಗಿದೆ."

– **ಕನ್ನಯ್ಯ ಮುತ್ಯಾ.,** ಪಟ್ಟದ ದೇವರು, ಮೋರಟಗಿ

# ವಂದಾಲ ಬನಶಂಕರಿ ದೇವಿಗೆ ಮಹಾ ರುದ್ರಾಭಿಷೇಕದ ಸಂಭ್ರಮ



ಉದಯರಶ್ಮಿ ನ್ಯೂಸ್

ಆಲಮಟ್ಟಿ: ವಂದಾಲ ಗ್ರಾಮದ ಬನಶಂಕರಿ ದೇವಿಗೆ ಪ್ರತಿವರ್ಷದಂತೆ ಈ ಬಾರಿಯೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಗುರುವಾರ ಬಾದ್ಮಿ ಅಮವಾಸ್ಯೆಯಂದು ವಿಜ್ರಂಭಣೆಯಿಂದ ನೆರವೇರಿದವು.

ಗುರುವಾರ ಬೆಳಿಗ್ಗೆ ಗ್ರಾಮದ ಸಂಗಮೇಶ್ವರ ದೇವಸ್ಥಾನದಿಂದ ಕುಂಭಮೇಳದೊಂದಿಗೆ ಕಿರು ರಥೋತ್ಸವ ನೆರವೇರಿತು. 9 ಗಂಟೆಗೆ ಬನಶಂಕರಿ ದೇವಿಯ ಮೂಲ ವಿಗ್ರಹಕ್ಕೆ ಲಘುನ್ಯಾಸ ಮಹಾ ರುದ್ರಾಭಿಷೇಕ, ಪೂಜಾ ಕೈಂಕರ್ಯವನ್ನು ಸುಕ್ಷೇತ್ರ ಬಾದಾಮಿಯ ಮೂಲ ಅರ್ಚಕರಾದ ಚಿದಂಬರ ಭಟ್ಟರು ನೆರವೇರಿಸಿದರು. ನಂತರ ನೆರವೇರಿದ ನಂದಿಕೋಲು, ಕುಂಭಮೇಳ, ಅಂಬಾರಿ ಮೇಳದ ಮೆರವಣಿಗೆಯುದ್ದಕ್ಕೂ ಸಹಸ್ರಾರು ಭಕ್ತಾದಿಗಳು ಪಾಲ್ಗೊಂಡಿದ್ದರು. ಮೆರವಣಿಗೆಯುದ್ದಕ್ಕೂ ಜನಮನ ಸೂರೆಗೊಂಡ ವಾದ್ಯಮೇಳವನ್ನು ಕೆ.ಕೃಷ್ಣಾ ಮೋಹನರಾವ್ ಅವರು ಏರ್ಪಡಿಸಿದ್ದರು.

ಮಧ್ಯಾಹ್ನ ಪವಾಡ ಬಸವೇಶ್ವರ ಮಠದಲ್ಲಿ ಅನ್ನ ಸಂತರ್ಪಣೆಯನ್ನು ಪರಮಭಕ್ತರಾದ ಬನಪ್ಪ ಸೋಮಪ್ಪ ಹಳ್ಳದ ಏರ್ಪಡಿಸಿದ್ದರು. ಸಂಜೆ ಪುರವಂತರ ಸೇವೆಯೊಂದಿಗೆ ಬನಶಂಕರಿ ದೇವಿಯ ಪಲ್ಲಕ್ಕಿ ಉತ್ಸವ ನೆರವೇರಿತು.

ಅಂಬಾರಿಗಿಲ್ಲ ಈ ಬಾರಿ ಅವಕಾಶ;

ವಂದಾಲ ಗ್ರಾಮದಲ್ಲಿ ಪ್ರತಿವರ್ಷ ಬಾದ್ಮಿ ಅಮವಾಸ್ಯೆಯಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಜತೆಗೆ ಅಂಬಾರಿ ಮಹೋತ್ಸವವೂ ಇಡೀ ಕಾರ್ಯಕ್ರಮಕ್ಕೆ ಕಳೆಗಟ್ಟುವಂತಿ–ರುತ್ತಿತ್ತು. ಆದರೆ ಈ ಬಾರಿ ಸರ್ಕಾರದ ವಿವಿಧ ಕಟ್ಟಳೆಗಳಿಂದಾಗಿ ಅಂಬಾರಿ ಮಹೋತ್ಸವವನ್ನು ಕೈ ಬಿಟ್ಟು ಕೃತಕ ಆನೆ ನಿರ್ಮಿಸಿ ಅಂಬಾರಿ ಮಹೋತ್ಸವ ಮಾಡಲಾಗಿತ್ತು.

# ರೇವತಗಾಂವದಲ್ಲಿ ದೇವರ ಪಲ್ಲಕ್ಕಿಗಳ ಭೇಟಿ ಸಂಭ್ರಮ

ಉದಯರಶ್ಮಿ ನ್ಯೂಸ್

ಚಡಚಣ: ಬಾದಮಿ ಅಮಾವಾಸ್ಯೆಯ ನಿಮಿತ್ತ ರೇವತಗಾಂವ ಗ್ರಾಮದ ಅದಿದೇವ ಶ್ರೀ ಮಲಕಾರಸಿದ್ಧ ದೇವರ ಜಾತ್ರೆಯ ನಿಮಿತ್ತ ಗುರುವಾರದಂದು ನಸುಕಿನ ಜಾವ 05 ಗಂಟೆಗೆ ರುದ್ರಾಭೀಷೇಕ ಪೂಜೆ ನೆರವೇರಿತು. ನಂತರ ಭಕ್ತ–ರಿಂದ ದೀರ್ಘದಂಡ ನಮಸ್ಕಾರವು ನೆರವೇರಿತು. 10 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ ಗ್ರಾಮದ ಮಾಳಿಂಗರಾಯ ಡೊಳ್ಳಿನ ಗಾಯನ ಸಂಘದ ಮಾಳಪ್ಪ ಹಕ್ಕೆ ಹಾಗೂ ಮಲಕಾರಸಿದ್ದ ಡೊಳ್ಳಿನ ಗಾಯನ ಸಂಘದ ಮಲ್ಲಪ್ಪ ಪೂಜಾ–ರಿಯವರು ಮತ್ತು ಸಂಗಡಿಗರಿಂದ ಸುಪ್ರಸಿದ್ಧ ಡೊಳ್ಳಿನ ಪದಗಳು ಜರುಗಿದವು.

ಪಲ್ಲಕ್ಕಿಗಳ ಭೇಟಿ ಸಂಭ್ರಮ: ಗ್ರಾಮದ ಶ್ರೀ ರೇವಣಸಿದ್ದೇಶ್ವರ ದೇವಾಸ್ಥಾನದ ಮುಂಭಾಗ



ಸಾಯಂಕಾಲ 5:30 ಗಂಟೆಗೆ ಗಿರಗಾಂವದ ಅಮೋಘಸಿದ್ಧ, ಬಾಲಗಾಂವದ ಅಮೋಘಸಿದ್ಧ, ಗೋವಿಂದಪುರದ ಲಕ್ಕವ್ವದೇ, ರೇವತಗಾಂವದ ಮಲಕಾರಸಿದ್ಧ ಹಾಗೂ ಲಗಮವ್ವದೇವಿ ದೇವರುಗಳ ಪಲ್ಲಕ್ಕಿಗಳ ಭೇಟಿಯು ಅದ್ಧೂ–ರಿಯಾಗಿ ನೆರವೇರಿತು. ಈ ವೇಳೆಯಲ್ಲಿ ಭಕ್ತರು ಪಲ್ಲಕ್ಕಿಗಳ ಮೇಲೆ ಹೂ, ಭಂಡಾರ, ಚುರುಮುರಿ, ಶೇಂಗಾ, ಖಾರೀಕ್, ಬದಾಮಿ ಹಾರಿಸಿ ಭಕ್ತರು ತಮ್ಮ ತಮ್ಮ ಹರಕೆಗಳನ್ನು ತೀರಿಸಿದರು.

ಈ ಭೇಟಿ ಕಾರ್ಯಕ್ರಮವನ್ನು ನೋಡಲು ಮಹಾರಾಷ್ಟ ಸೇರಿದಂತೆ ಕರ್ನಾಟಕದ ವಿವಿಧ ಗ್ರಾಮಗಳ ಸಹಸ್ರಾರು ಭಕ್ತರು ಸೇರಿದ್ದರು.

# ದೈವದತ್ತ ಕೊಡುಗೆಗಳು

ಉದಯರಶ್ಮಿ ದಿನಪತ್ರಿಕೆ

ವೀಣಾಂತರಂಗ



–ವೀಣಾ ಎಚ್. ಪಾಟೀಲ್, ಮುಂಡರಗಿ

ಐಷಾರಾಮಿ ಹಾಸಿಗೆಯ ಮೇಲೆ ಮಲಗಬಹುದು.. ನಿದ್ದೆಯನ್ನು ಕೊಳ್ಳಲು ಸಾಧ್ಯವಿಲ್ಲ,

ಮೃಷ್ಟಾನ್ನ ಭೋಜನ ತಟ್ಟೆಯಲ್ಲಿಹುದು.. ಆದರೆ ಹಸಿವಿಲ್ಲ,

ಜಗತ್ತಿನ ಎಲ್ಲ ಸುಖಗಳು ಅಂಗೈಯಲ್ಲಿ ಸಿಗಬಹುದು.. ಅನುಭವಿಸಲು ಆರೋಗ್ಯವಿಲ್ಲ

ಹಾಗಾದರೆ ಓರ್ವ ವ್ಯಕ್ತಿಗೆ ಬದುಕಿನಲ್ಲಿ ಮುಖ್ಯವಾಗಿ ಬೇಕಾದದ್ದು ಯಾವುದು?? ಎಲ್ಲವೂ ಇದ್ದು ಏನೂ ಇಲ್ಲದಂತಹ ಮಾನಸಿಕ ವಿಷಣ್ಣತೆ ಮನುಷ್ಯನನ್ನು ಕಾಡುವುದಾದರೂ ಏಕೆ?

ಇದಕ್ಕೆ ಪರಿಹಾರಗಳು ಉಂಟೆ?

ಖಂಡಿತವಾಗಿಯೂ.. ಒಂದು ಸೂಕ್ಷ್ಮ ಜೀವಕೋಶದಿಂದ ಉದಿಸಿದ,ಒಂದು ಹತ್ತಾಗಿ ಹತ್ತು ಇಪ್ಪತ್ತಾಗಿ ಲಕ್ಷಾಂತರ ಜೀವಕೋಶಗಳ ಹೊಂದಿರುವ ಮನುಷ್ಯನ ನಿಜವಾದ ಅವಶ್ಯಕತೆಗಳು ಬಹಳವೇ ಕಡಿಮೆ. ತಾನು ತನ್ನದು ತನಗಾಗಿ ಎಂದು ಆತ ವೈಯುಕ್ತಿಕ ಪರಿಧಿಯಲ್ಲಿ ಯೋಚಿಸಲಾರಂಭಿಸಿದರೆ ಈ ಭೂಮಿಯ ಮೇಲಿರುವ ಎಲ್ಲವೂ ಆತನ ಬೇಡಿಕೆಯ ಪರಿಧಿಯಲ್ಲಿ ಬರುತ್ತದೆ.

ಮೂಲಭೂತವಾಗಿ ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು.. ಒಂದೊಳ್ಳೆಯ ಆರೋಗ್ಯ, ಸೊಂಪಾದ ನಿದ್ರೆ, ಪೌಷ್ಟಿಕ ಆಹಾರ, ಪ್ರಕೃತಿಯೊಂದಿಗೆ ಒಡನಾಟ, ತನ್ನವರ ಪ್ರೀತಿ ವಿಶ್ವಾಸ, ಸಮಯ ಮತ್ತು ತನ್ನಿಚ್ಛೆಯಂತೆ ಬದುಕುವ ಸ್ವಾತಂತ್ರ್ಯ.. ಇವುಗಳಲ್ಲಿ ಕೆಲವನ್ನು ವೈಯುಕ್ತಿಕ ಸಾಧನೆಯ ಮೂಲಕ ಸಂಪಾದಿಸಿಕೊಂಡರೆ ಮತ್ತೆ ಕೆಲವು ದೈವದತ್ತ ಕೊಡುಗೆಗಳು. ಆದರೆ ಇವುಗಳ ನಡುವೆ ಪರಸ್ಪರ ಸಂಬಂಧವಿದೆ.



ಅದೆಷ್ಟೇ ಒಳ್ಳೆಯ ವಿದ್ಯೆ ಉದ್ಯೋಗಗಳನ್ನು ಹೊಂದಿದ್ದರೂ, ಸಾಮಾಜಿಕವಾಗಿ ಉನ್ನತ ಸ್ಥಾನಮಾನಗಳನ್ನು ಹೊಂದಿದ್ದರೂ ನಾವು ಮಾಡುವ ಕೆಲಸದಲ್ಲಿ ತೃಪ್ತಿ, ಸಮಾಧಾನಗಳು ದೊರೆಯದೆ ಹೋದಾಗ ತನ್ನಿಚ್ಛೆಯಂತೆ ಕಾರ್ಯನಿರ್ವಹಿಸುವ ಸ್ವಾತಂತ್ರ್ಯ ತನಗಿಲ್ಲದೆ ಹೋದಾಗ ಮನುಷ್ಯ ಅಶಾಂತಿಗೀಡಾಗುತ್ತಾನೆ.

ಈ ಅಶಾಂತಿ ಆತನ ಮಾನಸಿಕ ನೆಮ್ಮದಿಯನ್ನು ಕಸಿಯುತ್ತದೆ, ನಾನು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರದಲ್ಲಿ ತೊಂದರೆಯನ್ನು ಅನುಭವಿಸುವ ಆತ ಕಂಗೆಡುತ್ತಾನೆ. ಔದ್ಯೋಗಿಕವಾಗಿ ತನ್ನ ಹಿನ್ನಡೆಯನ್ನು ವೈಯುಕ್ತಿಕವಾಗಿಸಿಕೊಂಡು ನಿಧಾನವಾಗಿ ಧೂಮಪಾನ, ಮದ್ಯಪಾನಗಳಂತಹ ದುಶ್ಚಟಗಳಿಗೀಡಾಗುತ್ತಾನೆ. ಇದು ಆತನ ಮನೋ ದೈಹಿಕ ಆರೋಗ್ಯ ಕೆಡಲು ಕಾರಣವಾಗುತ್ತದೆ. ಈ ಹಿಂದೆ ಗಳಿಸಿ ಬಾಚಿ ಎತ್ತಿಟ್ಟ ಹಣ ಆತನ ಆತನ ಚಟಗಳಿಗೆ ಆತನ ಆರೋಗ್ಯ ಸುಧಾರಿಸಲು ವ್ಯಯವಾಗುತ್ತದೆ.


ಇನ್ನು ಆತನ ಕುಟುಂಬಸ್ಥರಿಗೆ ಇದರ ಅರಿವಾಗುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ.. ಇಲ್ಲಿಯೂ ಕೂಡ ತಮ್ಮ ಅಹಮ್ಮಿನ ಕೋಟೆಯನ್ನೊಡೆದು ಯಾ–ರಿಗೂ ತನಗಾಗುತ್ತಿರುವ ನೋವು ತೊಂದರೆಯನ್ನು ತಿಳಿಸದೇ ಇದ್ದರೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ.

ಇದು ಉದ್ಯೋಗಸ್ಥ ಪುರುಷರ ಕಥೆಯಾದರೆ ಹೆಣ್ಣುಮಕ್ಕಳದು ಮತ್ತೊಂದು ರೀತಿ.

ಹುಟ್ಟುವಾಗಲೇ ಅಯ್ಯೋ ಹೆಣ್ಣು ಮಗು ಎಂಬ ಭಾವ ಹುಟ್ಟಿದ ಮನೆಯಲ್ಲಿದ್ದರೆ ಆಕೆ ಕೇವಲ ಆ ಮನೆಯ ಮಗಳಾಗುತ್ತಾಳೆ.. ಮುಂದೆ ಪರರ ಮನೆಗೆ ಹೋಗುವ ಸ್ವತ್ತು ಎಂಬಂತೆ ಜವಾಬ್ದಾರಿಯ



[illegible] ಹಂತದ ವಿದ್ಯಾಭ್ಯಾಸ ಮುಗಿಸಿದ ನಂತರ ಆಕೆಗೆ ಯೋಗ್ಯ?? ವ್ಯಕ್ತಿಯೊಂದಿಗೆ ವಿವಾಹ ಮಾಡಿ ಗಂಡನ ಮನೆಗೆ ಕಳುಹಿಸಿ ಬಿಟ್ಟರೆ ತಮ್ಮ ಜವಾಬ್ದಾರಿ ಮುಗಿದಂತೆ ಎಂದು ಭಾವಿಸುವ ತಂದೆ ತಾಯಿಯ ಮಗಳಾದರೆ ಆಕೆ ಸಹಜವಾಗಿಯೇ ಕೀಳರಿಮೆಯಿಂದ ಬಳಲುತ್ತಾಳೆ. ಹುಟ್ಟಿದ ಮನೆಗೆ ಪರಕೀಯಳಾಗುವ ಆಕೆಯನ್ನು ಗಂಡನ ಮನೆಯವರು ಮತ್ತೊಂದು ಮನೆಯಿಂದ ಬಂದವಳು, ತಮ್ಮ ಮನೆಯ ತೊಟ್ಟು ಎಂಬಂತೆ ಭಾವಿಸಿದರೆ ಆಕೆಯ ಬದುಕು ಬಾಣಲಿಯಿಂದ ಬೆಂಕಿಗೆ ಬಿದ್ದಂತಾಗುತ್ತದೆ. ಇದ್ದುದರಲ್ಲಿಯೇ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿ ಒಂದೊಳ್ಳೆಯ ಉದ್ಯೋಗ ಹೊಂದಿರುವ ಹೆಣ್ಣು ಮಕ್ಕಳ ಸ್ಥಿತಿ ಕೊಂಚ ಉತ್ತಮ. ತವರು ಮತ್ತು ಗಂಡನ ಮನೆ ಎರಡರಲ್ಲಿಯೂ [illegible] ಹೆಣ್ಣುಮಗಳ ಮುಂದೆ ಇರುವುದು ಕೇವಲ ಎರಡು ಆಯ್ಕೆಗಳು. ಮೆಟ್ಟಿದ ಮನೆಯ ಎಲ್ಲ ಜನರ ಮನವೊಲಿಸಿ ಅವರಿಗೆ ಬೇಕು ಬೇಕಾದಂತೆ ಮಾಡಿ ಬಡಿಸಿ ಅವರ ಚಾಕರಿ ಮಾಡುವುದು ಇಲ್ಲವೇ ತನಗೆ ಬೇಕಾದಂತೆ ಅವರನ್ನು ಒಪ್ಪಿಸಿ ಬದುಕುವುದು. ಭಾರತೀಯ ಸಾಮಾಜಿಕ ಸ್ಥಿತಿಗತಿಗಳಲ್ಲಿ [illegible] ಸುಲಭವಾಗಿದ್ದು ಬಹುತೇಕ ಹೆಣ್ಣು ಮಕ್ಕಳು ಸೋಲ್ಲೆತ್ತದೇ ಮೊದಲನೇ ಆಯ್ಕೆಯನ್ನು ಮಾಡಿಕೊಳ್ಳುತ್ತಾರೆ.... ಸಂಘರ್ಷಕ್ಕೆ ಎಡೆ ಮಾಡಿಕೊಡುವುದೇ ಇಲ್ಲ. ಅವರು ಕೂಡ ಜೀವನದ ಒಂದು ಹಂತದಲ್ಲಿ ಅಯ್ಯೋ ನಾವು ತಪ್ಪು ಮಾಡಿದೆವು ಎಂದು ಹಲುಬುತ್ತಾರೆ,ಸ್ವಯಂ ಕೃತ



ಅಪರಾಧವಾದರೂ ಪಶ್ಚಾತಾಪ ತಪ್ಪಿದ್ದಲ್ಲ. ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಯೋಚಿಸಿ.

ಆದ್ದರಿಂದ ನಾವು ಮುಖ್ಯವಾಗಿ ಯೋಚಿಸ ಬೇಕಾಗಿರುವುದು ಇಷ್ಟು.. ಈ ಭೂಮಿಗೆ ನಾವು ಬರುವಾಗ ಏನನ್ನು ತಂದಿಲ್ಲ ಹೋಗುವಾಗ ಏನನ್ನು ಒಯ್ಯುವುದಿಲ್ಲ ಇರುವವರೆಗಿನ ಈ ಜೀವನದಲ್ಲಿ ಆಯ್ಕೆ ನಮ್ಮದು.. ಕೈಗೆಟುಕದ್ದಕ್ಕೆ ಆಸೆ ಪಡದೆ ಇದ್ದುದರಲ್ಲಿಯೇ ಜೀವನ ಸಾಗಿಸಬೇಕು. ಸಾಧನೆಯ ಹಾದಿಯಲ್ಲಿ ಬರುವ ಎಲ್ಲ ಎಡರು ತೊಡರುಗಳನ್ನು ಆತ್ಮವಿಶ್ವಾಸದಿಂದ ಎದುರಿಸಬೇಕು.

ಭಗವದ್ಗೀತೆಯಲ್ಲಿನ "ಕರ್ಮಣ್ಣೇ ವಾಧಿಕಾರಸ್ತೆ ಮಾಫಲೇಶು ಕದಾಚನ" ಎಂಬ ಉಪ್ಪಿನಂತೆ ನಮ್ಮ ಪಾಲಿಗೆ ಬಂದ ಕೆಲಸಗಳನ್ನು ಪಲಾ ಫಲದ ನಿರೀಕ್ಷೆಯಿಲ್ಲದೆ ನಾವು ಮಾಡಬೇಕು.

ನೆನ್ನೆ ನಮ್ಮ ಕೈಯಲ್ಲಿಲ್ಲ... ನಾಳೆ ಏನಾಗುವುದು ಗೊತ್ತಿಲ್ಲ. ಆದರೆ ವರ್ತಮಾನ ಖಂಡಿತವಾಗಿಯೂ ನಮ್ಮದು ಎಂಬ ಹೊನ್ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಒಳ್ಳೆಯ ಆರೋಗ್ಯ, ಸುಖಕರ ನಿದ್ದೆ, ಆಹಾರ, ಕೌಟುಂಬಿಕ ಪ್ರೀತಿ, ಸ್ನೇಹಿತರ ಸಾಂಗತ್ಯ, ನಿಮ್ಮಿಷ್ಟದಂತೆ ಬದುಕುವ ಸ್ವಾತಂತ್ರ್ಯದಂತಹ ದೈವದತ್ತ ಕೊಡುಗೆಗಳನ್ನು ನಮ್ಮದಾಗಿಸಿಕೊಂಡು ಸಾರ್ಥಕ ಬದುಕನ್ನು ಸಾಗಿಸೋಣ.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR